# 2013ರ ಕರ್ನಾಟಕ ಅಧಿನಿಯಮ ಸಂಖ್ಯೆ 10

## ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ಅಧಿನಿಯಮ, 2012

## ಪ್ರಕರಣಗಳ ಪಟ್ಟಿ


**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**ಪ್ರಕರಣಗಳು:**

ಅಧ್ಯಾಯ – I

ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

ಅಧ್ಯಾಯ – II

3. ಪ್ರಾಧಿಕಾರದ ರಚನೆ
4. ಪದಾವಧಿ ಮತ್ತು ಸೇವಾ ಷರತ್ತುಗಳು
5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ
6. ಸದಸ್ಯನನ್ನು ತೆಗೆದುಹಾಕುವುದು
7. ಕಾರ್ಯನಿರ್ವಹಣಾ ನಿರ್ದೇಶಕರು
8. ಪ್ರಾಧಿಕಾರದ ಅಧಿಕಾರಿಗಳು ಮತ್ತು ಸೇವಾ ಷರತ್ತುಗಳು
9. ಪ್ರಾಧಿಕಾರದ ಸಭೆಗಳು
10. ಸೂಕ್ತವಾದುದೆಂದು ಮತ್ತು ಮಾನ್ಯವಾದುದೆಂದು ಭಾವಿಸಲಾಗುವ ವ್ಯವಹರಣೆಗಳು
11. ಪ್ರಾಧಿಕಾರದ ಕಾರ್ಯನಿರ್ವಹಣಾ ಸಮಿತಿ
12. ಕಾರ್ಯನಿರ್ವಹಣಾ ನಿರ್ದೇಶಕರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು
13. ಉಪಸಮಿತಿ
14. ಉಪಸಮಿತಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು
15. ತಜ್ಞರ ಸೇವೆಗಳನ್ನು ಪಡೆಯುವುದು

ಅಧ್ಯಾಯ – III

16. ಪ್ರಾಧಿಕಾರದ ಧ್ಯೇಯೋದ್ದೇಶ ಮತ್ತು ಗುರಿಗಳು
17. ಪ್ರಾಧಿಕಾರದ ಪ್ರಕಾರ್ಯಗಳು
18. ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವುದು
19. ಈ ಅಧಿನಿಯಮಕ್ಕೆ ಅನುಸಾರವಾಗಿ ಇರಬೇಕಾದ ಶಿಕ್ಷಣ ಸಂಸ್ಥೆಗಳು
20. ಪ್ರಾಧಿಕಾರವು ಪಠ್ಯವಿಷಯ ಇತ್ಯಾದಿಗಳನ್ನು ನಿಯಮಿಸುವುದು

ಅಧ್ಯಾಯ – IV

ಶೈಕ್ಷಣಿಕ ಪ್ರಾಧಿಕಾರಿಗಳು

21. ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದು

ಅಧ್ಯಾಯ – V

ಶಿಕ್ಷಣ ಸಂಸ್ಥೆಗಳಿಗೆ ಮನ್ನಣೆ ನೀಡುವುದು ಇತ್ಯಾದಿ

22. ಮನ್ನಣೆ
23. ತಜ್ಞ ಮಂಡಲಿ
24. ಹಾಲಿ ಇರುವ ಸಂಸ್ಥೆಗಳಿಗೆ ಮನ್ನಣೆ, ಇತ್ಯಾದಿ
25. ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು

ಅಧ್ಯಾಯ - VI

ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಮೊದಲಾದವುಗಳ ವ್ಯವಸ್ಥಾಪಕ ವರ್ಗ

26. ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯಗಳು
27. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪನೆ
28. ಗ್ರಂಥಾಲಯ ಸೇವೆ

ಅಧ್ಯಾಯ - VII

ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು

29. ನೌಕರರ ಅರ್ಹತೆಗಳು ಮತ್ತು ಸೇವಾ ಷರತ್ತುಗಳು
30. ನೌಕರರ ನೇಮಕಾತಿ
31. ನೌಕರರ ಅನುಸೂಚಿಯನ್ನು ಇಡುವುದು
32. ನಡತೆ ಸಂಹಿತೆ

ಅಧ್ಯಾಯ - VIII

ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ

33. ಆಡಳಿತ ಪರಿಷತ್ತಿನ ನಡತೆ ಸಂಹಿತೆ
34. ಸ್ವತ್ತುಗಳ ಪಟ್ಟಿಯನ್ನು ಒದಗಿಸುವುದು
35. ನಿಧಿ, ಮುಂತಾದವುಗಳ ಬಳಕೆ
36. ಸಾಕಷ್ಟು ನೋಟೀಸು ಕೊಡದೆ ಖಾಸಗಿ ಸಂಸ್ಥೆಗಳನ್ನು ಮುಚ್ಚದಿರುವುದು ಇತ್ಯಾದಿ

ಅಧ್ಯಾಯ - IX

ದಂಡನೆಗಳು

37. ರ್‍ಯಾಗಿಂಗ್ ಮಾಡಿದ್ದಕ್ಕಾಗಿ ದಂಡನೆ
38. ನೋಂದಣಿಯಾಗದ ಶಿಕ್ಷಣ ಸಂಸ್ಥೆಗಳು ಮುಂತಾದುವನ್ನು ಸ್ಥಾಪಿಸಿದ್ದಕ್ಕಾಗಿ ದಂಡನೆ
39. 27ನೇ ಪ್ರಕರಣವನ್ನು ಉಲ್ಲಂಘಿಸಿ ಹಣ ಸಂಗ್ರಹಿಸುವುದಕ್ಕಾಗಿ ದಂಡನೆ.
40. ಆಡಳಿತ ಪರಿಷತ್ತು ನಡತೆ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ದಂಡನೆ.
41. ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ನೋಟೀಸನ್ನು ಕೊಡಲು ತಪ್ಪಿರುವುದಕ್ಕಾಗಿ ದಂಡನೆ
42. ಅಪರಾಧದ ಬಗ್ಗೆ ಉಪಬಂಧಿಸಿರದ ಜುಲ್ಮಾನೆಗಳು
43. ಕಂಪನಿಗಳಿಂದ ಅಪರಾಧಗಳು
44. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗೆ ಅಥವಾ ಇನ್ನಿತರ ವ್ಯಕ್ತಿಗೆ ಅಡ್ಡಿಯುಂಟು ಮಾಡಿದ್ದಕ್ಕೆ ದಂಡನೆ
45. ರಕ್ಷಣೆ
46. ತನಿಖೆ ಹಾಗೂ ಅಪರಾಧಗಳ ಸಂಜ್ಞಾನ
47. ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ

ಅಧ್ಯಾಯ - X

ಪ್ರಾಧಿಕಾರದ ನಿಧಿ

48. ಪ್ರಾಧಿಕಾರದ ನಿಧಿ
49. ಯೋಜನೆ ಮತ್ತು ಕಾರ್ಯಕ್ರಮಕ್ಕೆ ಹಂಚಿಕೆ
50. ರಾಜ್ಯ ಸರ್ಕಾರದಿಂದ ಅನುದಾನ
51. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ

## ಅಧ್ಯಾಯ - XI
## ಸಂಕೀರ್ಣ

52. ವರದಿ
53. ಪ್ರಾಧಿಕಾರದ ಆಯವ್ಯಯ ಪತ್ರ
54. ಅಪೀಲುಗಳು
55. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ
56. ಪುನರಾವಲೋಕನ
57. ನಿರ್ದೇಶನಗಳನ್ನು ಕೊಡಲು ಸರ್ಕಾರದ ಅಧಿಕಾರ
58. ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ
59. ನಿಯಮಗಳ ರಚನಾಧಿಕಾರ
60. ವಿನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ
61. ತಾತ್ಕಾಲಿಕ ಉಪಬಂಧಗಳು
62. 1962ರ ಕರ್ನಾಟಕ ಅಧಿನಿಯಮದ ತಿದ್ದುಪಡಿ

### ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2013ರ ಅಧಿನಿಯಮ ಸಂಖ್ಯೆ 10.–** ರಾಜ್ಯದಲ್ಲಿ ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ಸಮರ್ಥಗೊಳಿಸುವ, ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವ ಉದ್ದೇಶಕ್ಕಾಗಿ ಮತ್ತು ಶಿಕ್ಷಣದ ಗುಣಮಟ್ಟವನ್ನು ಕಾಪಾಡುವುದಕ್ಕಾಗಿ ಹಾಗೂ ಅಭಿವೃದ್ಧಿಪಡಿಸುವುದಕ್ಕಾಗಿ ಒಂದು ಪ್ರಾಧಿಕಾರವನ್ನು ಸ್ಥಾಪಿಸಿ ನಿಗಮಿತಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆಯ ವಿಧೇಯಕ ಸಂಖ್ಯೆ:32, ಕಡತ ಸಂಖ್ಯೆ:ಸಂವ್ಯಶಾಇ 58 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೇ ನಮೂದನೆ ಮತ್ತು 2ನೇ ಪಟ್ಟಿಯ 32ನೇ ನಮೂದನೆಯಡಿಯಲ್ಲಿ ಬರುತ್ತದೆ.)

---

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 10**

**(2013ರ ಜನವರಿ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ಅಧಿನಿಯಮ, 2012**

(2013ರ ಜನವರಿ ಇಪ್ಪತ್ತೆಂಟನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)

ನರ್ಸಿಂಗ್, ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳನ್ನು ನಿಯಂತ್ರಿಸಲು ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ನರ್ಸಿಂಗ್, ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳನ್ನು ನಿಯಂತ್ರಿಸಲು ಒಂದು ಪ್ರಾಧಿಕಾರವನ್ನು ಸ್ಥಾಪಿಸಲು ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

## ಅಧ್ಯಾಯ – I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(this Act came in to force w.e.f 05.08.2013 by notification No: HFW 217 MMC 2013 Dated: 05.08.2013.)

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಶೈಕ್ಷಣಿಕ ವರ್ಷ" ಎಂದರೆ, ಯಾವುದೇ ನಿರ್ದಿಷ್ಟ ಪ್ರದೇಶಕ್ಕೆ ಅಥವಾ ಯಾವುದೇ ಶಿಕ್ಷಣ ಸಂಸ್ಥೆಗೆ ಅಥವಾ ಶಿಕ್ಷಣ ಸಂಸ್ಥೆಗಳ ವರ್ಗಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಂದು ಪ್ರಾರಂಭವಾಗುವ ವರ್ಷ;

(ಬಿ) "ಅನುಮೋದಿತ ಶಾಲೆ" ಎಂದರೆ, ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿರುವ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ ಅಥವಾ ನರ್ಸಿಂಗ್ ಶಿಕ್ಷಣ ನೀಡುತ್ತಿರುವ ಹಾಗೂ –

(i) ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಆಡಳಿತದ ಅಧೀನದಲ್ಲಿರುವ; ಅಥವಾ

(ii) ಯಾವುದೇ ಇತರ ಆಡಳಿತ ವರ್ಗದ ಅಧೀನದಲ್ಲಿದ್ದು ಪ್ರಾಧಿಕಾರದ ಅಥವಾ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಯಿಂದ ಮನ್ನಣೆ ಪಡೆದಿರುವ,

– ಯಾವುದೇ ಶಾಲೆ ಅಥವಾ ಸಂಸ್ಥೆ;

(ಸಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ನರ್ಸಿಂಗ್, ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ;

(ಡಿ) "ಹಿಂದುಳಿದ ವರ್ಗಗಳು" ಎಂದರೆ, ಭಾರತ ಸಂವಿಧಾನದ (15)ನೇ ಅನುಚ್ಛೇದದ (4)ನೇ ಖಂಡದ ಅಥವಾ ಸಂದರ್ಭಾನುಸಾರ 16ನೇ ಅನುಚ್ಛೇದದ (4)ನೇ ಖಂಡದ ಉದ್ದೇಶಗಳಿಗಾಗಿ ಸರ್ಕಾರವು ಮನ್ನಣೆ ನೀಡಿದ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಯಾವುದೇ ನಾಗರೀಕ ವರ್ಗಗಳು;

(ಇ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ;

(ಎಫ್) "ಸಕ್ಷಮ ಪ್ರಾಧಿಕಾರ" ಎಂದರೆ, ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳ ಅಡಿಯಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಪ್ರದೇಶಕ್ಕಾಗಿ ಅಥವಾ ಅಂಥ ಉದ್ದೇಶಗಳಿಗಾಗಿ ಅಥವಾ ಸಂಸ್ಥೆಗಳ ಅಂಥ ವರ್ಗಗಳಿಗಾಗಿ ಸಕ್ಷಮ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಪ್ರಾಧಿಕಾರವು ಅಧಿಸೂಚನೆ ಮೂಲಕ ಅಧಿಕೃತಗೊಳಿಸಿದ ಪ್ರಾಧಿಕಾರದ ಯಾವೊಬ್ಬ ವ್ಯಕ್ತಿ ಅಥವಾ ಅಧಿಕಾರಿ;

(ಜಿ) "ಇಲಾಖೆ" ಎಂದರೆ, ವೈದ್ಯಕೀಯ ಶಿಕ್ಷಣ ಇಲಾಖೆ;

(ಎಚ್) ಖಾಸಗಿ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ, "ಶಿಕ್ಷಣ ಏಜೆನ್ಸಿ" ಎಂದರೆ ಅಂಥ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಮತ್ತು ಅದರ ಆಡಳಿತ ನಡೆಸುತ್ತಿರುವ ಅಥವಾ ಅದನ್ನು ಸ್ಥಾಪಿಸಲು ಮತ್ತು ಅದರ ಆಡಳಿತ ನಡೆಸಲು ಉದ್ದೇಶಿಸಿರುವ ಅಥವಾ ಅಂಥ ಶಿಕ್ಷಣ ಸಂಸ್ಥೆಯ ಸ್ಥಾಪನೆ, ವ್ಯವಸ್ಥಾಪನೆ, ಆಡಳಿತ ಮತ್ತು ನಿರ್ವಹಣೆಯನ್ನು ವಹಿಸಿಕೊಂಡ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ;

(ಐ) "ಶಿಕ್ಷಣ ಸಂಸ್ಥೆ" ಎಂದರೆ, ನರ್ಸಿಂಗ್ ಅಥವಾ ಅರೆ ವೈದ್ಯಕೀಯ ಶಿಕ್ಷಣ ನೀಡುತ್ತಿರುವ ಯಾವುದೇ ಸಂಸ್ಥೆ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಯೂ ಇದರಲ್ಲಿ ಒಳಗೊಳ್ಳುತ್ತದೆ. ಆದರೆ ವಿಶ್ವವಿದ್ಯಾನಿಲಯದ ಅಥವಾ ಕೇಂದ್ರ ಸರ್ಕಾರದ ನೇರ ವ್ಯವಸ್ಥಾಪನೆಗೆ ಒಳಪಟ್ಟಿರುವ ಸಂಸ್ಥೆಗಳು ಇದರಲ್ಲಿ ಒಳಗೊಳ್ಳುವುದಿಲ್ಲ;

(ಜೆ) "ನೌಕರ" ಎಂದರೆ, ಶಿಕ್ಷಣ ಸಂಸ್ಥೆಯಲ್ಲಿ ನೇಮಕಗೊಂಡ ಯಾವೊಬ್ಬ ವ್ಯಕ್ತಿ;

(ಕೆ) "ಕಾರ್ಯನಿರ್ವಹಣಾ ನಿರ್ದೇಶಕರು" ಎಂದರೆ, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ;

(ಎಲ್) "ಆಡಳಿತ ಪರಿಷತ್ತು" ಎಂದರೆ, ಖಾಸಗಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಅಥವಾ ನಿರ್ವಹಿಸಲು ಈ ಅಧಿನಿಯಮದ ಅಡಿಯಲ್ಲಿ ಅನುಮತಿಸಲಾದ ಅಥವಾ ಅನುಮತಿಸಲಾಗಿದೆಯೆಂದು ಭಾವಿಸಲಾದ ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಮತ್ತು ಸದರಿ ಶಿಕ್ಷಣ ಸಂಸ್ಥೆಯ ವ್ಯವಹಾರಗಳನ್ನು ಯಾವ ಆಡಳಿತ ನಿಕಾಯಕ್ಕೆ ವಹಿಸಿಕೊಡಲಾಗಿದೆಯೋ ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಆ ಆಡಳಿತ ನಿಕಾಯ ಇದರಲ್ಲಿ ಒಳಗೊಳ್ಳುತ್ತದೆ;

(ಎಂ) "ಸ್ಥಳೀಯ ಪ್ರಾಧಿಕಾರ" ಎಂದರೆ, ಯಾವುದೇ ಸ್ಥಳೀಯ ಪ್ರದೇಶದ ಆಡಳಿತಕ್ಕಾಗಿ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯಾಗಿ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕಾನೂನಿನ ಮೂಲಕ ರಾಜ್ಯ ಸರ್ಕಾರವು ಸ್ಥಾಪಿಸಿದ ಪ್ರಾಧಿಕಾರ;

(ಎನ್) "ವ್ಯವಸ್ಥಾಪಕ ಸಮಿತಿ" ಎಂದರೆ, ಖಾಸಗಿ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪನೆಯನ್ನು ಮತ್ತು ಆಡಳಿತವನ್ನು ಯಾರಿಗೆ ವಹಿಸಲಾಗಿದೆಯೋ ಅಥವಾ ಅದರ ಹೊಣೆ ಯಾರಿಗೆ ವಹಿಸಲಾಗಿದೆಯೋ ಆ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯ ಮತ್ತು ಯಾವುದೇ ಸಂಘ, ನ್ಯಾಸ ಅಥವಾ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಅಂಥ ಸಂಸ್ಥೆಗಳ ವ್ಯವಸ್ಥಾಪನೆಯನ್ನು ನಿರ್ವಹಿಸುತ್ತಿದ್ದಲ್ಲಿ ಅಂಥ ಪ್ರತಿಯೊಂದು ಸಂಸ್ಥೆಯ ವ್ಯವಸ್ಥಾಪಕ ಸಮಿತಿಯೂ ಇದರಲ್ಲಿ ಒಳಗೊಳ್ಳುತ್ತದೆ;

(ಒ) "ವೈದ್ಯಕೀಯ ಶಿಕ್ಷಣ"ವು ಆಧುನಿಕ ವೈದ್ಯ ವಿಜ್ಞಾನದ ಎಲ್ಲ ವಿಭಾಗಗಳು, ಆಯುರ್ವೇದ ವೈದ್ಯ ಪದ್ಧತಿ, ಯುನಾನಿ ವೈದ್ಯ ಪದ್ಧತಿ, ಸಂಯೋಜಿತ ವೈದ್ಯ ಪದ್ಧತಿ, ದೇಶೀ ವೈದ್ಯ ಪದ್ಧತಿ, ಪ್ರಕೃತಿ ಚಿಕಿತ್ಸಾ ಪದ್ಧತಿ, ಸಿದ್ಧ ಅಥವಾ ಹೋಮಿಯೋಪತಿ-ಈ ಮುಂತಾದುವುಗಳ ಶಿಕ್ಷಣವನ್ನು ಒಳಗೊಳ್ಳುತ್ತದೆ;

(ಪಿ) "ಸದಸ್ಯ" ಎಂದರೆ, ಪ್ರಾಧಿಕಾರದ ಸದಸ್ಯ;

(ಕ್ಯೂ) "ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆ" ಎಂದರೆ, ಭಾರತ ಸಂವಿಧಾನದ 30ನೇ ಅನುಚ್ಛೇದದ (1)ನೇ ಖಂಡದ ಅಡಿಯಲ್ಲಿ ಧರ್ಮವನ್ನು ಅಥವಾ ಭಾಷೆಯನ್ನು ಆಧರಿಸಿ ತಮ್ಮ ಇಷ್ಟಾನುಸಾರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ನಿರ್ವಹಿಸಲು ಹಕ್ಕುಳ್ಳಂಥ ಅಲ್ಪಸಂಖ್ಯಾತರು ಹಾಗೆ ಸ್ಥಾಪಿಸಿ ನಿರ್ವಹಿಸುವಂಥ ಖಾಸಗಿ ಶಿಕ್ಷಣ ಸಂಸ್ಥೆ;

(ಆರ್) "ಅರೆ ವೈದ್ಯಕೀಯ ಶಿಕ್ಷಣ" ಎಂದರೆ, ಲ್ಯಾಬೋರೇಟರಿ ಟೆಕ್ನಾಲಜಿ, X-ರೇ ಟೆಕ್ನಾಲಜಿಯಲ್ಲಿ ನೆರವಾಗುವ ಮತ್ತು ಸಂಬಂಧಿಸಿದ ಆರೋಗ್ಯ ವಿಜ್ಞಾನಗಳು ಮತ್ತು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಡಿಪ್ಲೊಮೊ ಅಥವಾ ಸರ್ಟಿಫಿಕೇಟ್ ಕೋರ್ಸುಗಳಿಗೆ ಪೂರಕವಾಗುವ ಇತರ ಕೋರ್ಸುಗಳನ್ನು ಒಳಗೊಳ್ಳುತ್ತದೆ;

(ಎಸ್) "ಖಾಸಗಿ ಶಿಕ್ಷಣ ಸಂಸ್ಥೆ" ಎಂದರೆ, ಯಾವೊಬ್ಬ ವ್ಯಕ್ತಿಯು ಅಥವಾ ವ್ಯಕ್ತಿಗಳ ನಿಕಾಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಅಥವಾ ನಿರ್ವಹಿಸಿಕೊಂಡು ಬರುವ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣವನ್ನು ನೀಡುವ ಯಾವುದೇ ಶಿಕ್ಷಣ ಸಂಸ್ಥೆ, ಆದರೆ ಇದರಲ್ಲಿ,-

(i) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಅಥವಾ ಪ್ರಾಯೋಜಿಸಿದ ಯಾವುದೇ ಇತರ ಪ್ರಾಧಿಕಾರವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಅಥವಾ ನಿರ್ವಹಿಸುವ ಶಿಕ್ಷಣ ಸಂಸ್ಥೆಗಳು;

(ii) ಕಾನೂನಿನ ಮೂಲಕ ಸ್ಥಾಪಿತವಾದ ಯಾವುದೇ ವಿಶ್ವವಿದ್ಯಾಲಯವು ಸ್ಥಾಪಿಸಿದ ಮತ್ತು ಆಡಳಿತ ನಡೆಸುವ ಶಿಕ್ಷಣ ಸಂಸ್ಥೆ;

(iii) ಅನುಮೋದಿತ ಪಠ್ಯ ವಿಷಯ ಅಥವಾ ವ್ಯಾಸಂಗ ಕ್ರಮ ಅಥವಾ ಸರ್ಕಾರದ ಇಲ್ಲವೇ ವಿಶ್ವವಿದ್ಯಾಲಯದ ಪರೀಕ್ಷೆಗಳಿಲ್ಲದ ಶಿಕ್ಷಣವನ್ನು ನೀಡುವ ಶಿಕ್ಷಣ ಸಂಸ್ಥೆಗಳು,

– ಇದರಲ್ಲಿ ಒಳಗೊಳ್ಳುವುದಿಲ್ಲ;

(ಟಿ) "ಸಾರ್ವಜನಿಕ ಹಿತಾಸಕ್ತಿ" ಎಂಬುವಲ್ಲಿ ಸಾರ್ವಜನಿಕ ಸುವ್ಯವಸ್ಥೆ, ಜನಾರೋಗ್ಯ, ಸಾರ್ವಜನಿಕ ನೈತಿಕತೆ ಮತ್ತು ಅಂಥದೇ ಇತರ ಉದ್ದೇಶಗಳು ಒಳಗೊಳ್ಳುತ್ತವೆ;

(ಯು) "ರ್‍ಯಾಗಿಂಗ್" ಎಂದರೆ, ಯಾವೊಬ್ಬ ವಿದ್ಯಾರ್ಥಿಗೆ ಕ್ರಿಯಾಪೂರ್ಣ ತಮಾಷೆಯಾಗಿ ಅಥವಾ ಇತರ ರೀತಿಯಲ್ಲಿ ಬೆದರಿಕೆ ಒಡ್ಡುವ, ಅಕ್ರಮವಾಗಿ ನಿಗ್ರಹಿಸುವ, ಅಕ್ರಮವಾಗಿ ಬಂಧನದಲ್ಲಿಡುವ ಅಥವಾ ಅವನಿಗೆ ಗಾಯವನ್ನುಂಟುಮಾಡುವ ಅಥವಾ ಅವನ ಮೇಲೆ ಅಪರಾಧಿಕ ಬಲ ಪ್ರಯೋಗ ಮಾಡುವ ಮೂಲಕ ಅಥವಾ ಹಾಗೆ ಬೆದರಿಕೆ ಒಡ್ಡುವ, ಅಕ್ರಮವಾಗಿ ಬಂಧನದಲ್ಲಿಡುವ, ಗಾಯಗೊಳಿಸುವ ಅಥವಾ ಅಪರಾಧಿಕ ಬಲ ಪ್ರಯೋಗ ಮಾಡುವ, ಬೆದರಿಕೆ ಒಡ್ಡುವ ಮೂಲಕ ಮಾನವನ ಘನತೆಗೆ ಕುಂದುಂಟು ಮಾಡುವ ಅಥವಾ ಅವನ ಶರೀರವನ್ನು ಹಿಂಸೆಗೊಳಪಡಿಸುವ ಅಥವಾ ಅವನನ್ನು ಅಪಹಾಸ್ಯಕ್ಕೀಡಾಗುವಂತೆ ಮಾಡುವ ಯಾವುದೇ ಕೃತ್ಯವನ್ನು ಮಾಡುವಂತೆ ಅಥವಾ ಯಾವುದೇ ಕಾನೂನುಬದ್ಧ ಕಾರ್ಯವನ್ನು ಮಾಡದಂತೆ ಮಾಡುವುದು, ಪ್ರೇರೇಪಿಸುವುದು, ಒತ್ತಾಯ ಮಾಡುವುದು ಅಥವಾ ಬಲವಂತ ಮಾಡುವುದು;

(ವಿ) "ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ ಮತ್ತು ಸದರಿ ಅಧಿನಿಯಮದ ಅಡಿಯಲ್ಲಿ ಮಾನ್ಯತೆ ಪಡೆದಿದೆ ಎಂದು ಭಾವಿಸಲಾದ ಸಂಸ್ಥೆಯನ್ನು ಒಳಗೊಳ್ಳುತ್ತದೆ;

(ಡಬ್ಲ್ಯೂ) "ಖಾಸಗಿ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ ಕಾರ್ಯದರ್ಶಿ" ಎಂದರೆ, ಅವನನ್ನು ಯಾವ ಹೆಸರಿನಿಂದಲಾದರೂ ಕರೆದರೂ ಸರಿಯೆ, ಖಾಸಗಿ ಶಿಕ್ಷಣ ಸಂಸ್ಥೆಯ ನಿಯಮಗಳ ಅಥವಾ ವಿನಿಯಮಗಳ ಅಡಿಯಲ್ಲಿ, ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಯನ್ನು ವಹಿಸಿಕೊಡಲಾಗಿರುವ ಮುಖ್ಯ ಕಾರ್ಯನಿರ್ವಾಹಕನಾಗಿರುವಂಥ ಯಾವೊಬ್ಬ ವ್ಯಕ್ತಿ;

(ಎಕ್ಸ್) "ಸಂಘ" ಎಂಬುದು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) ಅಥವಾ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಣಿಯಾದ ಸಂಘವನ್ನು ಅಥವಾ ಮುಂಬೈ ನ್ಯಾಸಗಳ ಅಧಿನಿಯಮ, 1950ರ ಅಡಿಯಲ್ಲಿ ನೋಂದಾಯಿತವಾದ ನ್ಯಾಸವನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ;

(ವೈ) "ವಿನಿಯಮ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ವಿನಿಯಮಗಳು.

## ಅಧ್ಯಾಯ - II

**3. ಪ್ರಾಧಿಕಾರದ ರಚನೆ.-** (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಬೆಂಗಳೂರಿನಲ್ಲಿ ಕೇಂದ್ರ ಸ್ಥಾನವಿರುವ ಕರ್ನಾಟಕ ನರ್ಸಿಂಗ್, ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರವೆಂದು ಕರೆಯಲ್ಪಡುವ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ ನಿಯಂತ್ರಣಕ್ಕಾಗಿ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ಮಂಡಳಿಯು ಈ ಮುಂದಿನ ಸದಸ್ಯರನ್ನು ಹೊಂದಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿಗಳು | ಅಧ್ಯಕ್ಷರು |
| (ಬಿ) | ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯರು |
| (ಸಿ) | ರಿಜಿಸ್ಟ್ರಾರ್, ಕರ್ನಾಟಕ ನರ್ಸಿಂಗ್ ಪರಿಷತ್ | ಪದನಿಮಿತ್ತ ಸದಸ್ಯರು |
| (ಡಿ) | ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ನರ್ಸಿಂಗ್ ಶಾಲೆಗಳ ಇಬ್ಬರು ಪ್ರಾಂಶುಪಾಲರು | ಸದಸ್ಯರು |
| (ಇ) | ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಅರೆ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ ಇಬ್ಬರು ಪ್ರಾಂಶುಪಾಲರು | ಸದಸ್ಯರು |
| (ಎಫ್) | ಕಾರ್ಯನಿರ್ವಹಣಾ ನಿರ್ದೇಶಕರು | ಸದಸ್ಯ ಕಾರ್ಯದರ್ಶಿ |

**4. ಪದಾವಧಿ ಮತ್ತು ಸೇವಾ ಷರತ್ತುಗಳು.–** (1) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು ರಾಜ್ಯ ಸರ್ಕಾರದಿಂದ ನೇಮಿಸಲಾದ ಸರ್ಕಾರೇತರ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(2) ಪದನಿಮಿತ್ತ ಸದಸ್ಯರನ್ನು ಹೊರತು ಪಡಿಸಿದ್ದ, ಸದಸ್ಯರು ತಮ್ಮ ಸಹಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ತಮ್ಮ ಹುದ್ದೆಗೆ ರಾಜೀನಾಮೆ ನೀಡಬಹುದು ಆದರೆ, ತನ್ನ ರಾಜೀನಾಮೆಯು ಅಂಗೀಕಾರವಾಗುವವರೆಗೂ ಹುದ್ದೆಯಲ್ಲಿ ಮುಂದುವರಿಯತಕ್ಕದ್ದು.

(3) ಸರ್ಕಾರೇತರ ಸದಸ್ಯರ ಕಚೇರಿಯಲ್ಲಿನ ಆಕಸ್ಮಿಕ ಖಾಲಿ ಹುದ್ದೆಯನ್ನು ಮತ್ತೊಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವ ಮೂಲಕ ರಾಜ್ಯ ಸರ್ಕಾರವು ಭರ್ತಿ ಮಾಡತಕ್ಕದ್ದು ಮತ್ತು ಹಾಗೇ ನಾಮನಿರ್ದೇಶಿತನಾದ ವ್ಯಕ್ತಿಯು ಆತನ ಪೂರ್ವಾಧಿಕಾರಿಯ ಪದದ ಬಾಕಿ ಉಳಿದ ಅವಧಿಯ ವರೆಗೆ ಪದಧಾರಣ ಮಾಡತಕ್ಕದ್ದು;

(4) ಸದಸ್ಯರು ನಿಯಮಿಸಬಹುದಾದ ಅಂತಹ ಭತ್ಯೆಗಳನ್ನು ಸ್ವೀಕರಿಸತಕ್ಕದ್ದು.

(5) ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಭತ್ಯೆಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

(6) ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು ಪ್ರಾಧಿಕಾರದ ಯಾವುದೇ ರಿಕ್ತ ಸ್ಥಾನವು ಇರುವುದೆಂಬ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

**5. ಹುದ್ದೆಯ ಸದಸ್ಯತ್ವಕ್ಕೆ ಅನರ್ಹತೆ.–** (1) ಒಬ್ಬ ವ್ಯಕ್ತಿಯು, ಅವನು,–

(ಎ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ದೋಷಸಿದ್ಧಿಯಾಗಿದ್ದು, ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅಸ್ವಸ್ಥಚಿತ್ತದವನಾಗಿದ್ದು, ಹಾಗೆಂದು ಒಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಸಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಡಿ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಒಂದು ನಿಕಾಯ ಅಥವಾ ನಿಗಮದ ಸೇವೆಯಿಂದ ತೆಗೆದುಹಾಕಲಾದವನಾಗಿದ್ದರೆ ಅಥವಾ ವಜಾ ಆದವನಾಗಿದ್ದರೆ, ಅಥವಾ

(ಇ) ಪ್ರಾಧಿಕಾರದ ಆದೇಶದಿಂದ ಮಾಡಲಾದ ಯಾವುದೇ ಕಾರ್ಯದಲ್ಲಿ ಅಥವಾ ಪ್ರಾಧಿಕಾರದೊಡನೆ ಅಥವಾ ಅದರ ಅಡಿಯಲ್ಲಿ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಸ್ವತಃ ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ ;

(ಎಫ್) ಪ್ರಾಧಿಕಾರದ ಪರವಾಗಿ ವೇತನ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾದರೆ ಅಥವಾ ಪ್ರಾಧಿಕಾರದ ವಿರುದ್ಧವಾಗಿ ನ್ಯಾಯವಾದಿಯ ನಿಯೋಜನೆಯನ್ನು ಒಪ್ಪಿಕೊಂಡಿದ್ದರೆ,

– ಸದಸ್ಯನಾಗಿ ನೇಮಿತನಾಗುವುದಕ್ಕೆ ಮತ್ತು ಸದಸ್ಯನಾಗುವುದಕ್ಕೆ ಅನರ್ಹನಾಗಿರತಕ್ಕದ್ದು.

(2) ಒಬ್ಬ ವ್ಯಕ್ತಿಯು ಪ್ರಾಧಿಕಾರದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ಜಾಹೀರಾತನ್ನು ಸೇರಿಸುವ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣ ದ (ಇ) ಮತ್ತು (ಎಫ್) ಖಂಡಗಳ ಅಡಿಯಲ್ಲಿ ಅನರ್ಹನಾಗತಕ್ಕದ್ದಲ್ಲ ಅಥವಾ ಸದರಿ ಖಂಡದ ಅರ್ಥವ್ಯಾಪ್ತಿಯಲ್ಲಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿದ್ದಾನೆಂದು ಭಾವಿಸತಕ್ಕದ್ದಲ್ಲ.

**6. ಸದಸ್ಯನನ್ನು ತೆಗೆದುಹಾಕುವುದು.–** (1) ರಾಜ್ಯ ಸರ್ಕಾರವು ಇತರ ಸದಸ್ಯನನ್ನು, ಅವನು,–

(ಎ) 5ನೇ ಪ್ರಕರಣದಲ್ಲಿ ಹೇಳಲಾದ ಯಾವುವೇ ಅನರ್ಹತೆಗಳಿಗೆ ಒಳಪಟ್ಟರೆ:

ಪರಂತು, ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಅವನು ಆ ಪ್ರಕರಣದ (1)ನೇ ಉಪ–ಪ್ರಕರಣದ (ಇ) ಖಂಡದಲ್ಲಿ ಹೇಳಲಾದ ಅನರ್ಹತೆಗೆ ಒಳಗಾಗಿದ್ದಾನೆಂಬ ಕಾರಣದ ಮೇಲೆ ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯವನ್ನು ನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯವನ್ನು ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಗೈರು ಹಾಜರಾಗಲು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದರೆ, ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ತನ್ನ ಸ್ಥಾನವನ್ನು ಅವನು ದುರುಪಯೋಗ ಪಡಿಸಿಕೊಂಡಿದ್ದು, ಅವನನ್ನು ಆ ಪದದಲ್ಲಿ ಮುಂದುವರಿಸಿದರೆ ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟಾಗುವುದೆಂದು ಕಂಡುಬಂದರೆ,

- ಸದಸ್ಯತ್ವದಿಂದ ಅವನನ್ನು ತೆಗೆದುಹಾಕತಕ್ಕದ್ದು:

ಪರಂತು, ಯಾವೊಬ್ಬ ಸದಸ್ಯನನ್ನು ಅವನಿಗೆ ಪ್ರಸ್ತಾವದ ವಿರುದ್ಧ ತನ್ನ ಮನವಿಯನ್ನು ಸಲ್ಲಿಸಲು ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಖಂಡದ ಅಡಿಯಲ್ಲಿ ತೆಗೆದುಹಾಕತಕ್ಕದ್ದಲ್ಲ.

7. **ಕಾರ್ಯನಿರ್ವಹಣಾ ನಿರ್ದೇಶಕರು.**- (1) ಕಾರ್ಯನಿರ್ವಹಣಾ ನಿರ್ದೇಶಕರು ಪ್ರಾಧಿಕಾರದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ವೈದ್ಯಕೀಯ ಶಿಕ್ಷಣದ ನಿರ್ದೇಶಕರು ಕಾರ್ಯನಿರ್ವಹಣಾ ಸಮಿತಿಯ ಕಾರ್ಯನಿರ್ವಹಣಾ ನಿರ್ದೇಶಕರಾಗಿರತಕ್ಕದ್ದು.

8. **ಪ್ರಾಧಿಕಾರದ ಅಧಿಕಾರಿಗಳು ಮತ್ತು ಸೇವಾ ಷರತ್ತುಗಳು.**- (1) ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು, ಪ್ರಾಧಿಕಾರವು ಅದರ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಪ್ರಾಧಿಕೃತಗೊಳಿಸಬಹುದಾದ ಅಂಥ ಇತರ ಅಧಿಕಾರಿಯು ನೇಮಕ ಮಾಡಬಹುದು ಅಥವಾ ಪ್ರತಿನಿಯೋಜಿಸಬಹುದು.

(2) ಮೇಲೆ ನಿರ್ದಿಷ್ಟಪಡಿಸಲಾದ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು:

ಪರಂತು, ಪ್ರತಿನಿಯೋಜನೆ ಮೇಲೆ ಇರುವ ವ್ಯಕ್ತಿಗಳ ಪದಾವಧಿ, ಪರಿಶ್ರಮಧನ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳನ್ನು ಸಂರಕ್ಷಿಸತಕ್ಕದ್ದು ಮತ್ತು ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ.

9. **ಪ್ರಾಧಿಕಾರದ ಸಭೆಗಳು.**- (1) ಪ್ರಾಧಿಕಾರದ ಸಭೆಗಳನ್ನು ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯನಿರ್ವಹಣಾ ನಿರ್ದೇಶಕರು ಕರೆಯತಕ್ಕದ್ದು ಮತ್ತು ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ನಡೆಸತಕ್ಕದ್ದು.

(2) ಪ್ರಾಧಿಕಾರವು ಕಡೇ ಪಕ್ಷ ಎರಡು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು.

(3) ಅಧ್ಯಕ್ಷರು ಅಥವಾ ಅಧ್ಯಕ್ಷರ ಪೂರ್ವಾನುಮತಿ ಪಡೆದು ಕಾರ್ಯನಿರ್ವಹಣಾ ನಿರ್ದೇಶಕರು ವಿಶೇಷ ಸಭೆಯನ್ನು ಕರೆಯುವುದು ಅವಶ್ಯವೆಂದು ಭಾವಿಸಿದರೆ, ಹಾಗೆ ಮಾಡಬಹುದು.

(4) ಪ್ರಾಧಿಕಾರವು ತನ್ನ ಸಭೆಗಳಲ್ಲಿ ಕಾರ್ಯನಿರ್ವಹಣೆಯ ಸಂಬಂಧದಲ್ಲಿ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂಥ ಕಾರ್ಯವಿಧಾನದ ನಿಯಮಗಳನ್ನು ಅನುಸರಿಸತಕ್ಕದ್ದು.

(5) ಅಧ್ಯಕ್ಷರು ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಕಾರಣದಿಂದ ಅಧ್ಯಕ್ಷರಿಗೆ ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ, ಉಪಾಧ್ಯಕ್ಷರು ಸಭೆಯಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು.

(6) ಕೋರಂ ಆಗಲು ಅರ್ಧದಷ್ಟು ಸದಸ್ಯರಿರತಕ್ಕದ್ದು.

10. **ಸೂಕ್ತವಾದುದೆಂದು ಮತ್ತು ಮಾನ್ಯವಾದುದೆಂದು ಭಾವಿಸಲಾಗುವ ವ್ಯವಹರಣೆಗಳು.**- ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾವೊಬ್ಬ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ಅನರ್ಹತೆ ಅಥವಾ ದೋಷವು, ಪ್ರಾಧಿಕಾರದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು ಈ ಅಧಿನಿಯಮದ ಬಂಧನಗಳಿಗನುಸಾರವಾಗಿಲ್ಲದ ಹೊರತು, ಅಂಥ ಕೃತ್ಯ ಅಥವಾ ವ್ಯವಹರಣೆಯನ್ನು ದೋಷಯುಕ್ತವೆಂದು ಭಾವಿಸತಕ್ಕದ್ದಲ್ಲ.

11. **ಪ್ರಾಧಿಕಾರದ ಕಾರ್ಯನಿರ್ವಹಣಾ ಸಮಿತಿ.**- (1) ಪ್ರಾಧಿಕಾರದ ದೈನಂದಿನ ವ್ಯವಹಾರವನ್ನು ನಡೆಸಲು ಪ್ರಾಧಿಕಾರದ ಒಂದು ಕಾರ್ಯನಿರ್ವಹಣಾ ಸಮಿತಿಯು ಇರತಕ್ಕದ್ದು.

(2) ಕಾರ್ಯನಿರ್ವಹಣಾ ಸಮಿತಿಯು ಪ್ರಾಧಿಕಾರದ ಎಲ್ಲಾ ವ್ಯವಹಾರವನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಮುಂದಿನ ಸಭೆಯಲ್ಲಿ ಅನುಮೋದನೆಗಾಗಿ ಪ್ರಾಧಿಕಾರದ ಎಲ್ಲಾ ಮುಖ್ಯ ವಿಷಯಗಳನ್ನು ವರದಿ ಮಾಡತಕ್ಕದ್ದು.

(1) (3) ಕಾರ್ಯನಿರ್ವಹಣಾ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು, ಎಂದರೆ:-

| | |
|---|---|
| (ಎ) ಕಾರ್ಯ ನಿರ್ವಹಣಾ ನಿರ್ದೇಶಕರು | : ಅಧ್ಯಕ್ಷರು |
| (ಬಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ | : ಸದಸ್ಯರು |

ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿ

(ಸಿ) ರಿಜಿಸ್ಟ್ರಾರ್ : ಸದಸ್ಯ-ಕಾರ್ಯದರ್ಶಿ

(4) ಕಾರ್ಯನಿರ್ವಹಣಾ ಸಮಿತಿಯ ಆಡಳಿತಾತ್ಮಕ ಮತ್ತು ಹಣಕಾಸು ಅಧಿಕಾರಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**12. ಕಾರ್ಯನಿರ್ವಹಣಾ ನಿರ್ದೇಶಕರ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.-** (1) ಕಾರ್ಯನಿರ್ವಹಣಾ ಸಮಿತಿಯು, ಪ್ರಾಧಿಕಾರದ ಅನುಮೋದನೆಗೆ ಒಳಪಟ್ಟು, ಹಣಕಾಸು ಅಥವಾ ಆಡಳಿತ ಮತ್ತು ಪರೀಕ್ಷೆಯನ್ನು ನಡೆಸುವುದಕ್ಕೆ ಸಂಬಂಧಿಸಿದ ಇತರೆ ವಿಷಯಗಳು ಒಳಗೊಂಡಂತೆ ಪ್ರತಿಯೊಂದು ವಿಷಯದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು. ಸರ್ಕಾರಕ್ಕೆ ಬರೆಯಬೇಕಾದ ಎಲ್ಲಾ ವಿಷಯಗಳನ್ನು ಪ್ರಾಧಿಕಾರದ ಕಾರ್ಯನಿರ್ವಹಣಾ ನಿರ್ದೇಶಕರು ಬರೆಯತಕ್ಕದ್ದು.

(2) ಪ್ರಾಧಿಕಾರದ ಕಾರ್ಯನಿರ್ವಹಣಾ ನಿರ್ದೇಶಕರು ಕಾರ್ಯನಿರ್ವಹಣಾ ಸಮಿತಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು. ಪ್ರಾಧಿಕಾರದ ಕಾರ್ಯನಿರ್ವಹಣಾ ನಿರ್ದೇಶಕರು ರಿಜಿಸ್ಟ್ರಾರ್‌ನೊಂದಿಗೆ ಜಂಟಿಯಾಗಿ ಬ್ಯಾಂಕು ಖಾತೆಗಳನ್ನು ನಿರ್ವಹಿಸುವುದಕ್ಕೆ ಹೊಣೆಗಾರನಾಗಿರತಕ್ಕದ್ದು.

(3) ಕಾರ್ಯನಿರ್ವಹಣಾ ನಿರ್ದೇಶಕರು ಪ್ರಾಧಿಕಾರದ ಹುದ್ದೆಯ ಸಂಬಂಧದಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿ "ಕಚೇರಿಯ ಮುಖ್ಯಸ್ಥರು" ಚಲಾಯಿಸುವ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ನಿಯಮಗಳು ಮತ್ತು ವಿನಿಯಮಗಳಲ್ಲಿ ನೀಡಿರುವಂತೆ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು. ಸ್ವತ್ತು ನಿಯಂತ್ರಣದ ಸುರಕ್ಷೆಗಾಗಿ ಮತ್ತು ಕಚೇರಿ ಲೆಕ್ಕಪತ್ರಗಳು/ನಿಧಿಗಳು ಮತ್ತು ಪತ್ರವ್ಯವಹಾರದ ನಿರ್ವಹಣೆಗಾಗಿ ಸಹ ಆತನು ಹೊಣೆಗಾರನಾಗಿರತಕ್ಕದ್ದು ಮತ್ತು ಕಚೇರಿ ಸಿಬ್ಬಂದಿಯು ಸಮಯಕ್ಕೆ ಸರಿಯಾಗಿ ಹಾಜರಾಗುತ್ತಿದ್ದಾರೆಯೇ ಮತ್ತು ಪ್ರಾಧಿಕಾರವು ಅಗತ್ಯಪಡಿಸಲಾದ ಅಂಥ ಎಲ್ಲಾ ಕರ್ತವ್ಯಗಳನ್ನು ಸಾಮಾನ್ಯವಾಗಿ ಪೂರೈಸುತ್ತಿದ್ದಾರೆಯೇ ಎಂಬುದನ್ನು ಗಮನಿಸತಕ್ಕದ್ದು. ಪ್ರಾಧಿಕಾರದ ಸಭೆಯ ವಿಷಯಸೂಚಿಯನ್ನು ಯೋಜಿಸುವುದಕ್ಕೆ ಆತನು ಹೊಣೆಗಾರನಾಗಿರತಕ್ಕದ್ದು. ಸಭೆಯ ತರುವಾಯ ಮೂವತ್ತು ದಿನಗಳೊಳಗೆ ಎಲ್ಲಾ ಸದಸ್ಯರಿಗೆ ಸಭೆಯ ವ್ಯವಹಾರಗಳನ್ನು ಸ್ತುತಿಸತಕ್ಕದ್ದು ಮತ್ತು ಸಭೆಯ ಎಲ್ಲಾ ನಿರ್ಧಾರಗಳನ್ನು ಅನುಷ್ಠಾನಗೊಳಿಸುವ ಕ್ರಮವನ್ನು ಪ್ರಾರಂಭಿಸತಕ್ಕದ್ದು.

(4) ಕಾರ್ಯನಿರ್ವಹಣಾ ನಿರ್ದೇಶಕರು ಅರೆವೈದ್ಯಕೀಯ ಸಂಸ್ಥೆಗಳು, ನರ್ಸಿಂಗ್ ಶಾಲೆಗಳು/ನರ್ಸಿಂಗ್ ಸಂಸ್ಥೆಗಳ ತಪಾಸಣೆಯನ್ನು ಮಾಡಿಸತಕ್ಕದ್ದು ಮತ್ತು ಮಂಜೂರಾದ ಪ್ರವೇಶಾವಕಾಶ (ಇನ್ ಟೇಕ್) ವಿದ್ಯಾರ್ಥಿಗಳ ಪ್ರವೇಶಾತಿ, ನವದೆಹಲಿಯ ಭಾರತೀಯ ನರ್ಸಿಂಗ್ ಪರಿಷತ್ತಿನ ಅನುಮೋದನೆ, ಆಂತರಿಕ ಮೌಲ್ಯಮಾಪನ ಅಂಕಗಳು ಮತ್ತು ಪಠ್ಯ ವಿಷಯಗಳ ಅನುಷ್ಠಾನದಂಥ ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ಗ್ರಂಥಾಲಯ, ಸ್ಥಳಾವಕಾಶ, ಕಟ್ಟಡ ಇತ್ಯಾದಿಯಂಥ ಪ್ಯಾಕಲ್ಟಿ ಮತ್ತು ಮೂಲ ಸೌಕರ್ಯಗಳ ಲಭ್ಯತೆಯು ನವದೆಹಲಿಯ ಭಾರತೀಯ ನರ್ಸಿಂಗ್ ಪರಿಷತ್ತಿನ ಮಾರ್ಗಸೂಚಿಯ ಅನ್ವಯವಾಗಿವೆಯೆಂದು ಸತ್ಯಾಪನೆ ಮಾಡತಕ್ಕದ್ದು.

(5) ಕಾರ್ಯನಿರ್ವಹಣಾ ನಿರ್ದೇಶಕರು, ವಾರ್ಷಿಕ ಮತ್ತು ಪೂರಕ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸುವುದಕ್ಕೆ ಮೊದಲು ಪ್ರಾಧಿಕಾರದ ಸಭೆಯನ್ನು ಮತ್ತು ಸಂದರ್ಭವು ಉದ್ಭವಿಸಿದಾಗ ವಿಶೇಷ ಸಭೆಯನ್ನು ಸಹ ಕರೆಯತಕ್ಕದ್ದು.

(6) ಕಾರ್ಯನಿರ್ವಹಣಾ ನಿರ್ದೇಶಕರು, ಡಿಪ್ಲೊಮೋ ಪ್ರಮಾಣ ಪತ್ರಗಳು, ಅಂಕಪಟ್ಟಿಗಳನ್ನು ಸಮಯಕ್ಕೆ ಸರಿಯಾಗಿ ನೀಡುವುದು ಮತ್ತು ಪೊಲೀಸು ಇಲಾಖೆ, ರಾಯಭಾರಿಗಳು (ಎಂಬೆಸಿಗಳು) ಮಾನವ ಸಂಪನ್ಮೂಲ ಇಲಾಖೆ ಮತ್ತು ಇತರ ಸಂಬಂಧಿಸಿದ ಇಲಾಖೆಗಳಿಂದ ಸ್ವೀಕೃತವಾದ ಪ್ರಮಾಣ ಪತ್ರಗಳನ್ನು ಸತ್ಯಾಪನೆ ಮಾಡಲು ಹೊಣೆಗಾರನಾಗಿರತಕ್ಕದ್ದು.

(7) ಕಾರ್ಯನಿರ್ವಹಣಾ ನಿರ್ದೇಶಕರು ಎಲ್ಲಾ ಕಾನೂನು ವಿಷಯಗಳಲ್ಲಿ ವಕಾಲತ್ತಿಗೆ ಸಹಿ ಮಾಡತಕ್ಕದ್ದು.

(8) ಕಾರ್ಯನಿರ್ವಹಣಾ ನಿರ್ದೇಶಕರು, ನರ್ಸಿಂಗ್/ಅರೆವೈದ್ಯಕೀಯ ಪರೀಕ್ಷೆಗೆ ಸಂಬಂಧಿಸಿದ ನರ್ಸಿಂಗ್ ಕಾರ್ಯಾಗಾರ/ಅಭಿಮುಖ ಕಾರ್ಯಕ್ರಮವನ್ನು ನಡೆಸುವುದಕ್ಕೆ ಹೊಣೆಗಾರನಾಗಿರತಕ್ಕದ್ದು.

(9) ಕಾರ್ಯನಿರ್ವಹಣಾ ನಿರ್ದೇಶಕರು, ಪ್ರಾಧಿಕಾರದ ನೌಕರರ ವಿರುದ್ಧ ಶಿಸ್ತಿಗೆ ಸಂಬಂಧಪಟ್ಟ ವ್ಯವಹರಣೆಗಳ ಮೇಲೆ ವಿಚಾರಣೆಗಳನ್ನು ನಡೆಸುವುದಕ್ಕೆ ಹೊಣೆಗಾರರಾಗಿರತಕ್ಕದ್ದು.

(10) ಕಾರ್ಯನಿರ್ವಹಣಾ ನಿರ್ದೇಶಕರು, ಮೊತ್ತವನ್ನು ಪಡೆಯಲು ಮತ್ತು ಹಂಚಲು ಬಿಲ್‌ಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಕಾರ್ಯನಿರ್ವಹಣಾ ಸಮಿತಿಯ ರಿಜಿಸ್ಟ್ರಾರ್‌ನೊಂದಿಗೆ ಜಂಟಿಯಾಗಿ ಚೆಕ್‌ಗಳಿಗೆ ಸಹಿ ಮಾಡತಕ್ಕದ್ದು.

(11) ಕಾರ್ಯನಿರ್ವಹಣಾ ನಿರ್ದೇಶಕರು, ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನ್ವಯ ನಗದು ಪುಸ್ತಕ ಮತ್ತು ಇತರ ಹಣಕಾಸಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸುವುದಕ್ಕೆ ಹೊಣೆಗಾರರಾಗಿರತಕ್ಕದ್ದು.

(12) ಕಾರ್ಯನಿರ್ವಹಣಾ ನಿರ್ದೇಶಕರು, ನೌಕರರಿಗೆ, ಸರಬರಾಜುದಾರರಿಗೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಸಹ ನಗದು ಹಂಚಿಕೆಗೆ ಹೊಣೆಗಾರರಾಗಿರತಕ್ಕದ್ದು.

(13) ಕಾರ್ಯನಿರ್ವಹಣಾ ನಿರ್ದೇಶಕರು, ಕರ್ನಾಟಕ ಸರ್ಕಾರವು ನಿಯಮಿಸಿದ ಕಚೇರಿ ಕಾರ್ಯವಿಧಾನದ ಅನ್ವಯ ದಾಖಲೆಗಳ ನಿರ್ವಹಣೆಗೆ ಹೊಣೆಗಾರರಾಗಿರತಕ್ಕದ್ದು.

(14) ಕಾರ್ಯನಿರ್ವಹಣಾ ನಿರ್ದೇಶಕರು, ಪ್ರಾಧಿಕಾರದ ಉಗ್ರಾಣಗಳು ಮತ್ತು ದಾಸ್ತಾನು ಲೆಕ್ಕಪತ್ರಗಳ ನಿರ್ವಹಣೆಗೆ ಹೊಣೆಗಾರರಾಗಿರತಕ್ಕದ್ದು.

(15) ಕಾರ್ಯನಿರ್ವಹಣಾ ನಿರ್ದೇಶಕರು, ಸಿಬ್ಬಂದಿಯ ಸೇವಾ ರಿಜಿಸ್ಟರುಗಳು ಮತ್ತು ವೈಯಕ್ತಿಕ ಕಡತಗಳ ನಿರ್ವಹಣೆಗೆ ಹೊಣೆಗಾರರಾಗಿರತಕ್ಕದ್ದು.

(16) ಕಾರ್ಯನಿರ್ವಹಣಾ ನಿರ್ದೇಶಕರು, ದೀರ್ಘ ರಜೆಯಲ್ಲಿ ತೆರಳಿದಾಗ/ನಿವೃತ್ತಿಗೆ ಸಿದ್ಧತೆ/ಯಾವುದೇ ಸಂದರ್ಭಗಳಲ್ಲಿ ಖಾಲಿಸ್ಥಾನವು ಉದ್ಭವಿಸಿದಾಗ, ಉತ್ತರಾಧಿಕಾರಿಯು ನೇಮಕಗೊಳ್ಳುವವರೆಗೆ ಅಥವಾ ಪದಾಧಿಕಾರಿಯು ರಜೆಯಿಂದ ಹಿಂತಿರುಗುವವರೆಗೂ, ಸರ್ಕಾರವು ನಾಮನಿರ್ದೇಶನ ಮಾಡಿದ ಸೂಕ್ತ ಅಧಿಕಾರಿಯನ್ನು ಹೆಚ್ಚುವರಿ ಪ್ರಭಾರದಲ್ಲಿಡತಕ್ಕದ್ದು.

(17) ಕಾರ್ಯನಿರ್ವಹಣಾ ನಿರ್ದೇಶಕರು, ಪ್ರಾಧಿಕಾರದ ಸುಲಲಿತ ಕಾರ್ಯನಿರ್ವಹಣೆಗಾಗಿ, ಅಧ್ಯಕ್ಷರ ಪೂರ್ವ ಅನುಮೋದನೆಯೊಂದಿಗೆ, ಮೇಲೆ ನಿರ್ದಿಷ್ಟಪಡಿಸಿದ ತನ್ನ ಯಾವುದೇ ಅಧಿಕಾರಗಳನ್ನು, ತನ್ನ ಅಧೀನದಲ್ಲಿರುವವರಿಗೆ ಪ್ರತ್ಯಾಯೋಜಿಸಬಹುದು.

**13. ಉಪಸಮಿತಿ.–** ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಉದ್ದೇಶಕ್ಕೆ, ಶೈಕ್ಷಣಿಕ ವಿಷಯ, ಪರೀಕ್ಷೆ ಮತ್ತು ಮೌಲ್ಯಮಾಪನ ವಿಷಯಗಳಿಗಾಗಿ, ತನ್ನ ಸದಸ್ಯರುಗಳ ಪೈಕಿಯಿಂದ ಐವರು ಸದಸ್ಯರುಗಳಿಗೆ ಮೀರದ ಅಂಥ ಸದಸ್ಯರುಗಳನ್ನು ಒಳಗೊಂಡ ಒಂದು ಉಪಸಮಿತಿಯನ್ನು ರಚಿಸಬಹುದು. ಪ್ರಾಧಿಕಾರದ ಕಾರ್ಯದರ್ಶಿಯವರು ಉಪಸಮಿತಿಯ ಅಧ್ಯಕ್ಷರಾಗಿರತಕ್ಕದ್ದು.

**14. ಉಪಸಮಿತಿಗಳ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಪ್ರಾಧಿಕಾರವು ಪ್ರತ್ಯಾಯೋಜನೆ ಮಾಡಿದ ಪ್ರಾಧಿಕಾರದ ಅಂಥ ಅಧಿಕಾರಗಳನ್ನು ಉಪಸಮಿತಿಯು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(2) ಕಾರ್ಯನಿರ್ವಹಣಾ ನಿರ್ದೇಶಕರು ಕರೆದಾಗಲೆಲ್ಲಾ ಉಪಸಮಿತಿಯು ಸಭೆ ಸೇರತಕ್ಕದ್ದು.

(3) ಜರೂರು ವಿಷಯಗಳ ಮೇಲೆ ಉಪಸಮಿತಿಯು ಪ್ರಾಧಿಕಾರದ ನಿರ್ಧಾರದ ತ್ವರಿತ ಅನುಷ್ಠಾನದ ಪುನರೀಕ್ಷಣೆಯ ನಿರ್ಧಾರಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಜರೂರು ವಿಷಯದ ಮೇಲೆ ರಾಜ್ಯ ಸರ್ಕಾರದ ಕ್ರಮಕ್ಕಾಗಿ ಸಲಹೆ ನೀಡತಕ್ಕದ್ದು.

(4) ಉಪಸಮಿತಿಯು ತನ್ನ ಸಭೆಗಳ ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದಂತೆ ವಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬಹುದಾದಂತೆ ಅಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕದ್ದು.

**15. ತಜ್ಞರ ಸೇವೆಗಳನ್ನು ಪಡೆಯುವುದು.–** (1) ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ, ಪ್ರಾಧಿಕಾರವು, ಅವಶ್ಯವಾದಲ್ಲಿ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಧಾನದಲ್ಲಿ, ತಜ್ಞರ ಸೇವೆಗಳು ಅಥವಾ ನೆರವನ್ನು ಪಡೆಯಬಹುದು.

(2) ಹಾಗೆ ನೀಡಲಾದ ಸೇವೆಗಳು ಅಥವಾ ನೆರವಿಗಾಗಿ ಅಂಥ ತಜ್ಞರಿಗೆ ಸಂದಾಯ ಮಾಡಬೇಕಾದ ಗೌರವಧನ ಮತ್ತು ಭತ್ಯೆಗಳು ನಿಯಮಿಸಬಹುದಾದ ಅಂಥ ಮೊತ್ತವಾಗಿರತಕ್ಕದ್ದು.

## ಅಧ್ಯಾಯ – III

**16. ಪ್ರಾಧಿಕಾರದ ಧ್ಯೇಯೋದ್ದೇಶ ಮತ್ತು ಗುರಿಗಳು.–** (1) ನವದೆಹಲಿಯ ಭಾರತೀಯ ನರ್ಸಿಂಗ್ ಪರಿಷತ್ತಿನಲ್ಲಿ ಹೇಳಿರುವಂತೆ ಧ್ಯೇಯೋದ್ದೇಶಗಳಿಗನುಸಾರವಾಗಿ ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ಹಾಗೂ ನರ್ಸಿಂಗ್ ಪದ್ಧತಿಯ ಉನ್ನತ ಗುಣಮಟ್ಟವನ್ನು ಕಲ್ಪಿಸುವುದು.

(2) ಸಂಶೋಧನೆ ಮತ್ತು ಪ್ರಯೋಗದ ಮೂಲಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಶಿಕ್ಷಣದ ಅನ್ವೇಷಣೆ ಮತ್ತು ಪ್ರಗತಿಗಾಗಿ ಅವಕಾಶ ಕಲ್ಪಿಸುವುದು.

(3) ಕೌಶಲ್ಯ ಮತ್ತು ಸಾಮರ್ಥ್ಯದೊಂದಿಗೆ ಅರ್ಹ ಅರೆವೈದ್ಯಕೀಯ ಸಿಬ್ಬಂದಿ ಮತ್ತು ನರ್ಸಿಂಗ್ ಸಿಬ್ಬಂದಿಯನ್ನು ತಯಾರು ಮಾಡುವುದು.

**17. ಪ್ರಾಧಿಕಾರದ ಪ್ರಕಾರ್ಯಗಳು.–** (1) ನವದೆಹಲಿಯ ಭಾರತೀಯ ನರ್ಸಿಂಗ್ ಕೌನ್ಸಿಲ್‌ನ (ಐಎನ್‌ಸಿ) ಮಾರ್ಗಸೂಚಿಗಳಿಗೆ ಒಳಪಟ್ಟು ಕರ್ನಾಟಕದಲ್ಲಿ ಅರೆವೈದ್ಯಕೀಯ ಶಿಕ್ಷಣದಲ್ಲಿ ಮತ್ತು ನರ್ಸಿಂಗ್ ಶಿಕ್ಷಣದಲ್ಲಿ ಸಮನ್ವಯ, ನಿಯಂತ್ರಣ ಮತ್ತು ಸಮಾನ ಗುಣಮಟ್ಟವನ್ನು ತರುವುದು.

(2) ನರ್ಸಿಂಗ್ ಮತ್ತು ಅರೆವೈದ್ಯಕೀಯ ಸಂಸ್ಥೆಗಳಲ್ಲಿ ಪ್ರವೇಶವನ್ನು ನಿಯಂತ್ರಿಸುವುದು.

(3) ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ನೀಡುವ ಸಂಸ್ಥೆಗಳನ್ನು ನಿಯಂತ್ರಿಸುವುದು, ಮನ್ನಣೆಯನ್ನು ನೀಡುವುದು ಮತ್ತು ಗುಣಮಟ್ಟಗಳನ್ನು ಕಾಪಾಡುವುದು.

(4) ಡಿಪ್ಲೊಮೊ ನರ್ಸಿಂಗ್ ಪರೀಕ್ಷೆಯನ್ನು ಮತ್ತು ಅರೆವೈದ್ಯಕೀಯ ವ್ಯಾಸಂಗ ಕ್ರಮಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುವುದು.

(5) ಪರೀಕ್ಷೆಗಳನ್ನು ನಡೆಸುವುದು ಮತ್ತು ಪ್ರತಿವರ್ಷದ ಪರೀಕ್ಷೆಗಳಿಗೆ ಅಂಕಪಟ್ಟಿಗಳನ್ನು ನೀಡುವುದು ಮತ್ತು ಯಶಸ್ಸು ಹೊಂದಿದ ಅಭ್ಯರ್ಥಿಗಳಿಗೆ ಡಿಪ್ಲೊಮೊ ಪ್ರಮಾಣಪತ್ರಗಳನ್ನು ನೀಡುವುದು.

(6) ಶೈಕ್ಷಣಿಕ ಕಾರ್ಯಕ್ರಮಗಳು, ನವೀಕರಣ ಕಾರ್ಯಾಗಾರಗಳು ಮತ್ತು ವಿಚಾರಗೋಷ್ಠಿಗಳನ್ನು ನಡೆಸುವ ಮೂಲಕ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ವಿಜ್ಞಾನಗಳ ಶಾಲೆಗಳ ಗುಣಮಟ್ಟವನ್ನು ನಿರ್ವಹಿಸುವುದು ಮತ್ತು ಉನ್ನತೀಕರಿಸುವುದು.

(7) ಪ್ರತಿಯೊಂದು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಕಾರ್ಯಕ್ರಮಗಳ ದಿನಸೂಚಿಯನ್ನು ತಯಾರಿಸುವುದು.

(8) ಪರೀಕ್ಷೆಯಲ್ಲಿ ದುರಾಚರಣೆಗಳು, ಮತ್ತೊಬ್ಬನಂತೆ ನಟಿಸುವುದು ಮತ್ತು ಕಾನೂನು ಬಾಹಿರ ಚಟುವಟಿಕೆಗಳ ಸಂದರ್ಭದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವುದು ಮತ್ತು ಶಿಸ್ತು ಕ್ರಮವನ್ನು ಪ್ರಾರಂಭಿಸುವುದು.

(9) ಪರೀಕ್ಷರ ಪ್ಯಾನೆಲ್ ಅನ್ನು ನೇಮಕ ಮಾಡುವುದು.

(10) ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಿಶೋಧಕರನ್ನು ನೇಮಕ ಮಾಡುವುದು ಮತ್ತು ಕಾನೂನು ಸಲಹೆಗಾರರನ್ನು ಸಹ ನೇಮಕ ಮಾಡುವುದು.

(11) ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡುವುದು.

**18. ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವುದು.–** (1) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಎಲ್ಲಾ ಹಂತಗಳಲ್ಲಿ ನರ್ಸಿಂಗ್ ಮತ್ತು ಅರೆವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವುದು.

(2) ಪ್ರಾಧಿಕಾರವು, ಆ ನಿಟ್ಟಿನಲ್ಲಿ,–

(ಎ) ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಬಿ) ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ವ್ಯಕ್ತಿಗಳ ಖಾಸಗಿ ಸಂಸ್ಥೆಗೆ ನಿಯಮಿಸಬಹುದಾದಂತೆ ಅಂಥ ನಿರ್ದಿಷ್ಟ ವಿವರಣೆಗಳಿಗೆ ಅನುಸಾರವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದಕ್ಕೆ ಮತ್ತು ಅವುಗಳನ್ನು ನಿರ್ವಹಿಸುವುದಕ್ಕೆ ಅನುಮತಿಯನ್ನು ನೀಡಬಹುದು;

(ಸಿ) ಶಿಕ್ಷಣ ಸಂಸ್ಥೆಗಳನ್ನು ನೋಂದಾಯಿಸಬಹುದು;

(ಡಿ) ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ವರ್ಗದಲ್ಲಿ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶ ನೀಡಬೇಕಾದ ವ್ಯಕ್ತಿಗಳ ಕನಿಷ್ಠ ಅಥವಾ ಗರಿಷ್ಠ ಸಂಖ್ಯೆಯು ಒಳಗೊಂಡಂತೆ ಪ್ರವೇಶ ಮತ್ತು ಅಂಥ ಪ್ರವೇಶಕ್ಕಾಗಿ ಕನಿಷ್ಠ ವಯಸ್ಸನ್ನು ನಿಯಮಿಸಬಹುದು;

(ಇ) ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಅಂಥ ಸಂಸ್ಥೆಗಳ ವರ್ಗಕ್ಕಾಗಿ ಅರ್ಹತೆ ಅಥವಾ ಪ್ರವೇಶಗಳ ಷರತ್ತುಗಳನ್ನು ನಿಯಮಿಸಬಹುದು;

(ಎಫ್) ನರ್ಸಿಂಗ್ ಮತ್ತು ಅರೆವೈದ್ಯಕೀಯ ವ್ಯಾಸಂಗ ಕ್ರಮಗಳಲ್ಲಿ ಶಿಕ್ಷಣವನ್ನು ನೀಡುವ ಸಂಸ್ಥೆಗಳಿಗೆ ಅನುಮತಿ ನೀಡಬಹುದು ಅಥವಾ ಸಂಸ್ಥೆಗಳನ್ನು ಸ್ಥಾಪಿಸಬಹುದು; ಮತ್ತು

(ಜಿ) ತಾವು ಅವಶ್ಯ ಅಥವಾ ಯುಕ್ತವೆಂದು ಪರಿಗಣಿಸಬಹುದಾದ ಅಂಥ ಇತರ ಕ್ರಮಗಳನ್ನು ಕಾಲಕಾಲಕ್ಕೆ ತೆಗೆದುಕೊಳ್ಳಬಹುದು.

**19. ಈ ಅಧಿನಿಯಮಕ್ಕೆ ಅನುಸಾರವಾಗಿ ಇರಬೇಕಾದ ಶಿಕ್ಷಣ ಸಂಸ್ಥೆಗಳು.–** ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗನುಸಾರವಾಗಿ ಹೊರತು ಯಾವುದೇ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ.

**20. ಪ್ರಾಧಿಕಾರವು ಪಠ್ಯವಿಷಯ ಇತ್ಯಾದಿಗಳನ್ನು ನಿಯಮಿಸುವುದು.–** (1) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಪ್ರಾಧಿಕಾರವು, ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ, ಆದೇಶದ ಮೂಲಕ,–

(ಎ) ಬೋಧನೆಯ ಯಾವುದೇ ವ್ಯಾಸಂಗ ಕ್ರಮಕ್ಕಾಗಿ ಪಠ್ಯವಿಷಯಗಳು, ಪಠ್ಯಕ್ರಮಗಳು ಮತ್ತು ಪಠ್ಯ ಪುಸ್ತಕಗಳು;

(ಬಿ) ಅಂಥ ವ್ಯಾಸಂಗ ಕ್ರಮದ ಅವಧಿ;

(ಸಿ) ಬೋಧನೆಯ ಮಾಧ್ಯಮ;

(ಡಿ) ಪರೀಕ್ಷೆಗಳ ಸ್ಕೀಮು ಮತ್ತು ಮೌಲ್ಯಮಾಪನ;

(ಇ) ಒಂದು ಶೈಕ್ಷಣಿಕ ವರ್ಷದಲ್ಲಿ ಕೆಲಸದ ದಿನಗಳು ಮತ್ತು ಕೆಲಸದ ಗಂಟೆಗಳ ಸಂಖ್ಯೆ;

(ಎಫ್) ವಿದ್ಯಾರ್ಥಿಗಳಿಂದ ಅಥವಾ ವಿದ್ಯಾರ್ಥಿಗಳ ಪರವಾಗಿ ಚಾರ್ಜು ಮಾಡಬಹುದಾದ ಪಾಠ ಮತ್ತು ಇತರ ಫೀಜುಗಳು, ಕಟ್ಟಡ ನಿಧಿ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಮೊತ್ತದ ದರಗಳು;

(ಜಿ) ಸಿಬ್ಬಂದಿಯ ಸ್ವರೂಪ (ಬೋಧಕ ಮತ್ತು ಬೋಧಕೇತರ) ಮತ್ತು ವಿವಿಧ ಹುದ್ದೆಗಳಿಗೆ ಶೈಕ್ಷಣಿಕ ಮತ್ತು ಇತರ ವಿದ್ಯಾರ್ಹತೆಗಳು;

(ಎಚ್) ಕಟ್ಟಡಗಳು, ನೈರ್ಮಲ್ಯ ವ್ಯವಸ್ಥೆಗಳು, ಆಟದ ಮೈದಾನ, ಪೀಠೋಪಕರಣ, ಸಲಕರಣೆ, ಗ್ರಂಥಾಲಯ, ಬೋಧಕ ಸಾಮಗ್ರಿ, ಪ್ರಯೋಗಾಲಯ ಮತ್ತು ಕಾರ್ಯಾಗಾರಗಳು ಇವುಗಳಂಥ ಒದಗಿಸಬೇಕಾದ ಸೌಕರ್ಯಗಳು;

(ಐ) ಅವಶ್ಯವೆಂದು ಪರಿಗಣಿಸಲಾದ ಅಂಥ ಇತರ ವಿಷಯಗಳು,

– ಇವುಗಳನ್ನು ನಿರ್ದಿಷ್ಟಪಡಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿಯ ಪಠ್ಯವಿಷಯಗಳು,–

(ಎ) ನೈತಿಕ ಮತ್ತು ನೀತಿ ನಿಯಮ ಶಿಕ್ಷಣ;

(ಬಿ) ದೈಹಿಕಶಿಕ್ಷಣ, ಆರೋಗ್ಯ ಶಿಕ್ಷಣ ಮತ್ತು ಕ್ರೀಡೆಗಳು;

(ಸಿ) ಸಾಮಾಜಿಕವಾಗಿ ಪ್ರಯೋಜನಕಾರಿಯಾದ ಉತ್ಪಾದನಾ ಕೆಲಸ, ಕೆಲಸದ ಅನುಭವ ಮತ್ತು ಸಮಾಜಸೇವೆ;

(ಡಿ) ಅನ್ವೇಷಣಾ, ಕ್ರಿಯಾಶೀಲ ಮತ್ತು ಸಂಶೋಧನಾ ಚಟುವಟಿಕೆಗಳು;

(ಇ) ರಾಷ್ಟ್ರೀಯ ಭಾವೈಕ್ಯತೆಯ ಪ್ರವರ್ತನೆ; ಮತ್ತು

(ಎಫ್) ನಾಗರಿಕ ಪ್ರಜ್ಞೆಯ ಪ್ರವರ್ತನೆ,

– ಈ ಸ್ಕೀಮುಗಳನ್ನು ಸಹ ಒಳಗೊಂಡಿರಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿಯ ಕಟ್ಟಳೆಗಳು ಬೇರೆಬೇರೆ ಶಿಕ್ಷಣ ಸಂಸ್ಥೆಗಳ ಪ್ರವರ್ಗಗಳಿಗೆ ಬೇರೆಬೇರೆ ರೀತಿಯಲ್ಲಿ ಇರಬಹುದು.

(4) ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ,–

(ಎ) ಬೋಧನಾ ವ್ಯಾಸಂಗ ಕ್ರಮವು, (1)ನೇ ಉಪಪ್ರಕರಣದ ಅಡಿಯಲ್ಲಿ ಪಠ್ಯವಿಷಯಗಳು ಮತ್ತು ಇತರ ಷರತ್ತುಗಳಿಗೆ ಅನುರೂಪವಾಗಿರತಕ್ಕದ್ದು; ಮತ್ತು

(ಬಿ) ನಿಯಮಿಸಲಾದ ಕೆಲಸದ ಗಂಟೆಗಳ ಯಾವುದೇ ಭಾಗವನ್ನು, ಪಠ್ಯವಿಷಯಗಳಿಗೆ ಅನುಸಾರವಾದ ಬೋಧನೆಯನ್ನು ಹೊರತುಪಡಿಸಿ ಯಾವುದೇ ಇತರ ಉದ್ದೇಶಕ್ಕೆ ಬಳಸಿಕೊಳ್ಳತಕ್ಕದ್ದಲ್ಲ.

## ಅಧ್ಯಾಯ – IV
## ಶೈಕ್ಷಣಿಕ ಪ್ರಾಧಿಕಾರಿಗಳು

**21. ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವುದು.–** (1) ಪ್ರಾಧಿಕಾರವು, ರಿಜಿಸ್ಟ್ರಾರರನ್ನು ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಕಾರ್ಯನಿರ್ವಹಣಾ ನಿರ್ದೇಶಕರಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಆತನಿಗೆ ವಹಿಸಿದ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಆತನಿಗೆ ನೆರವು ನೀಡಲು ಅವಶ್ಯವಾಗಬಹುದಾದ ಅಂಥ ಸಂಖ್ಯೆಯ ಅಧಿಕಾರಿಗಳನ್ನು ನೇಮಕ ಮಾಡಬಹುದು.

(2) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ರಾಜ್ಯ ಸರ್ಕಾರದ ಮತ್ತು ಪ್ರಾಧಿಕಾರವು ಈ ಸಂಬಂಧದಲ್ಲಿ ಮಾಡಿದ, ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಕಾರ್ಯನಿರ್ವಹಣಾ ನಿರ್ದೇಶಕರು, ಈ ಸಂಬಂಧದಲ್ಲಿ ಆದೇಶದ ಮೂಲಕ ರಾಜ್ಯ ಸರ್ಕಾರವು ಹಂಚಿಕೆ ಮಾಡಬಹುದಾದಂತೆ ರಾಜ್ಯದಲ್ಲಿ ಶಿಕ್ಷಣದ ಅಂಥ ಭಾಗದ ಆಡಳಿತದೊಂದಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಮುಖ್ಯ ನಿಯಂತ್ರಣ ಪ್ರಾಧಿಕಾರಿಯಾಗಿರತಕ್ಕದ್ದು.

(3) ಈ ಅಧಿನಿಯಮದ ಆಡಳಿತದಲ್ಲಿ ನಿಯೋಜಿಸಲಾದ ಎಲ್ಲಾ ವ್ಯಕ್ತಿಗಳು ಪ್ರಾಧಿಕಾರದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಪ್ರತಿಯೊಬ್ಬ ಅಧಿಕಾರಿಯ ಅಧೀನ ಅಧಿಕಾರಿ ಅಥವಾ ಅಧಿಕಾರಿಗಳನ್ನು ಪ್ರಾಧಿಕಾರವು ನಿರ್ಧರಿಸತಕ್ಕದ್ದು.

## ಅಧ್ಯಾಯ – V
## ಶಿಕ್ಷಣ ಸಂಸ್ಥೆಗಳಿಗೆ ಮನ್ನಣೆ ನೀಡುವುದು ಇತ್ಯಾದಿ

**22. ಮನ್ನಣೆ.–** (1) ಸಂಘ ಅಥವಾ ನ್ಯಾಸವೆಂದು ನೋಂದಣಿಯಾದ ಯಾವುದೇ ಶಿಕ್ಷಣ ಸಂಸ್ಥೆಗೆ ಮನ್ನಣೆಯನ್ನು ನೀಡಬಹುದು.

(2) ಈ ಕೆಳಕಂಡ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು ಮನ್ನಣೆ ನೀಡತಕ್ಕದ್ದು, ಎಂದರೆ:–

(ಎ) ಪ್ರಾಧಿಕಾರವು ತೀರ್ಮಾನಿಸಿದಂತೆ ನಿಯಮಿಸಲಾದ ಮೊಬಲಗಿನ ಭದ್ರತಾ ಠೇವಣಿಯನ್ನು ನಿರ್ದಿಷ್ಟಪಡಿಸಿದ ಸಮಯದೊಳಗೆ ಸಂದಾಯ ಮಾಡತಕ್ಕದ್ದು;

(ಬಿ) ಸಂಸ್ಥೆಯನ್ನು ಭದ್ರ ತಳಹದಿಯ ಮೇಲೆ ನಡೆಸಲು ಸಾಕಷ್ಟು ನಿಧಿಗಳನ್ನು ಆಡಳಿತ ಪರಿಷತ್ತು ಹೊಂದಿರತಕ್ಕದ್ದು ಅಥವಾ ಹೊಂದುವ ಭರವಸೆ ಅದಕ್ಕೆ ಇರತಕ್ಕದ್ದು; ಮತ್ತು

(ಸಿ) ಬೋಧಕ ಮತ್ತು ಇತರ ಸಿಬ್ಬಂದಿ ವರ್ಗದ ವಸತಿ, ನೇಮಕಾತಿ ಮತ್ತು ಆಡಳಿತ ಪರಿಷತ್ತು ಒಪ್ಪಿಕೊಳ್ಳಬೇಕಾದ ಹಾಗೂ ಅನುಸರಿಸಬೇಕಾದ ನೀತಿ ಸಂಹಿತೆ, ಪೀಠೋಪಕರಣ ಮತ್ತು ಸಲಕರಣೆಗಳು, ಪಠ್ಯಕ್ರಮ, ಪಠ್ಯಪುಸ್ತಕಗಳು ಇವುಗಳ ಬಗ್ಗೆ ಪ್ರಾಧಿಕಾರವು ನಿಯಮಿಸಬಹುದಾದ ಅಂಥ ಇತರ ಸಾಮಾನ್ಯ ಅಥವಾ ವಿಶೇಷ ಷರತ್ತುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳು.

(3) ಖಾಸಗಿ ಶಿಕ್ಷಣ ಸಂಸ್ಥೆಗಾಗಿ ಮನ್ನಣೆ ಪಡೆಯಲು ಬಯಸುವ ಯಾವುದೇ ಆಡಳಿತ ಪರಿಷತ್ತು ನಿಯಮಿಸಬಹುದಾದ ಅಂಥ ವಿವರಗಳೊಂದಿಗೆ ಅಂಥ ರೀತಿಯಲ್ಲಿ ಮತ್ತು ಅಂಥ ಫೀಜಿನೊಂದಿಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(4) ಸಕ್ಷಮ ಪ್ರಾಧಿಕಾರವು, ಅರ್ಜಿಯು ನಿಯಮಗಳಿಗನುಸಾರವಾಗಿದೆಯೆಂಬ ಬಗ್ಗೆ ತಾನು ಮನದಟ್ಟು ಮಾಡಿಕೊಂಡ ತರುವಾಯ, (6)ರಿಂದ (8)ರ ವರೆಗಿನ ಉಪಪ್ರಕರಣಗಳಿಗೆ ಅನುಸಾರವಾಗಿ ಅರ್ಜಿಯನ್ನು ವಿಲೆ ಮಾಡಬಹುದು ಅಥವಾ ತಾನು ಸೂಕ್ತವೆಂದು ಭಾವಿಸಿದಲ್ಲಿ, 23ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ತಜ್ಞ ಮಂಡಳಿಯಿಂದ ವರದಿಯನ್ನು ಪಡೆದುಕೊಳ್ಳುವುದಕ್ಕಾಗಿ ಅದಕ್ಕೆ ಅರ್ಜಿಯನ್ನು ಕಳುಹಿಸಿಕೊಡಬಹುದು.

(5) ತಜ್ಞ ಮಂಡಲಿಯು, (4)ನೇ ಉಪಪ್ರಕರಣದ ಅಡಿಯಲ್ಲಿ ಕಳುಹಿಸಿಕೊಡಲಾದ ಅರ್ಜಿಯನ್ನು ಸ್ವೀಕರಿಸಿದ ಅನಂತರ, ನಿಯಮಿಸಬಹುದಾದ ಅಂಥ ಸಮಯದೊಳಗೆ ತನ್ನ ವರದಿಯ ಜೊತೆಗೆ ಅರ್ಜಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಹಿಂತಿರುಗಿಸತಕ್ಕದ್ದು.

(6) ಸಕ್ಷಮ ಪ್ರಾಧಿಕಾರವು, ತಜ್ಞ ಮಂಡಲಿಯಿಂದ ಸ್ವೀಕರಿಸಿದ ವರದಿಯೇನಾದರೂ ಇದ್ದಲ್ಲಿ ಅದನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯಕವೆಂದು ಭಾವಿಸಬಹುದಾದ ಅಂಥ ಪರಿಶೀಲನೆ ಅಥವಾ ವಿಚಾರಣೆಯನ್ನು ನಡೆಸಿದ ತರುವಾಯ, ಲಿಖಿತ ಆದೇಶದ ಮೂಲಕ,-

(ಎ) ಅಂಥ ಸಂಸ್ಥೆಗಳಿಗೆ ಮನ್ನಣೆ ನೀಡಲು ಅನ್ವಯವಾಗುವ ಎಲ್ಲ ಷರತ್ತುಗಳನ್ನು ಈಡೇರಿಸಿದ್ದರೆ ಅದಕ್ಕೆ ಮನ್ನಣೆ ನೀಡತಕ್ಕದ್ದು;

(ಬಿ) ಅಂಥ ಪ್ರಾಧಿಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಅಥವಾ ವಿಸ್ತರಿಸಿದ ಅವಧಿಯೊಳಗೆ ಮನ್ನಣೆ ನೀಡಲು ಇರುವ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು, ತಾತ್ಕಾಲಿಕವಾಗಿ ಅನುಮೋದನೆ ನೀಡತಕ್ಕದ್ದು:

ಪರಂತು, ಹಾಗೆ ತಾತ್ಕಾಲಿಕವಾಗಿ ಅನುಮೋದನೆ ನೀಡಿದ ಅವಧಿಯಲ್ಲಿ ಶಿಕ್ಷಣ ಸಂಸ್ಥೆಯು ವಿದ್ಯಾರ್ಥಿಗಳ ಯಾವುದೇ ಹೊಸ ತಂಡವನ್ನು ಸೇರಿಸಿಕೊಳ್ಳತಕ್ಕದ್ದಲ್ಲ.

(7) (6)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ಅವಧಿಯನ್ನು ನಿರ್ದಿಷ್ಟಪಡಿಸಿದ್ದರೆ ಅಥವಾ ವಿಸ್ತರಿಸಿದ್ದರೆ ಸಕ್ಷಮ ಪ್ರಾಧಿಕಾರವು, ಅಂಥ ಅವಧಿಯು ಮುಕ್ತಾಯವಾದ ತರುವಾಯ, ಕೂಡಲೇ 23ನೇ ಪ್ರಕರಣದ ಅಡಿಯಲ್ಲಿ ತಜ್ಞ ಮಂಡಲಿಯಿಂದ ವರದಿಯನ್ನು ಅಥವಾ ಹೆಚ್ಚಿನ ವರದಿಯನ್ನು ಪಡೆಯತಕ್ಕದ್ದು. ಸಕ್ಷಮ ಪ್ರಾಧಿಕಾರವು ವರದಿ ಅಥವಾ ಹೆಚ್ಚಿನ ವರದಿ ಯಾವುದಾದರೂ ಇದ್ದಲ್ಲಿ ಅದನ್ನು ಪರ್ಯಾಲೋಚಿಸಿ ಅಗತ್ಯವೆಂದು ಭಾವಿಸಬಹುದಾದಂಥ ಪರಿಶೀಲನೆಯನ್ನು ಅಥವಾ ವಿಚಾರಣೆಯನ್ನು ನಡೆಸಿದ ತರುವಾಯ, ಮಾನ್ಯತೆ ನೀಡಿಕೆಗೆ ಅಂಥ ಸಂಸ್ಥೆಗಳಿಗೆ ಅನ್ವಯವಾಗಬಹುದಾದ ಎಲ್ಲ ಷರತ್ತುಗಳನ್ನು ಆ ಸಂಸ್ಥೆಗಳು ಈಡೇರಿಸಿದ್ದರೆ ಲಿಖಿತ ಆದೇಶದ ಮೂಲಕ ಮಾನ್ಯತೆ ನೀಡತಕ್ಕದ್ದು ಅಥವಾ ಅಂಥ ಸಂಸ್ಥೆಗಳು ಅಂಥ ಷರತ್ತುಗಳನ್ನು ಈಡೇರಿಸದೇ ಇದ್ದರೆ ಕಾರಣಗಳನ್ನು ದಾಖಲು ಮಾಡಿ ಮಾನ್ಯತೆಯನ್ನು ನಿರಾಕರಿಸತಕ್ಕದ್ದು:

ಪರಂತು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು ಆ ಮಾನ್ಯತೆಯನ್ನು ಹಾಗೆ ನಿರಾಕರಿಸತಕ್ಕದ್ದಲ್ಲ.

(8) ಈ ಪ್ರಕರಣದ ಅಡಿಯಲ್ಲಿ ಮಾನ್ಯತೆಯನ್ನು ಮಂಜೂರು ಮಾಡುವ ಅಥವಾ ನಿರಾಕರಿಸುವ ಬಗ್ಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅರ್ಜಿದಾರನಿಗೆ ತಿಳಿಸತಕ್ಕದ್ದು.

**23. ತಜ್ಞ ಮಂಡಲಿ.–** ಪ್ರಾಧಿಕಾರವು, ನಿಯಮಿಸಬಹುದಾದಂಥ ನಿಯಮಿಸಬಹುದಾದ ಅಂಥ ನಿಯಮಗಳಿಗೊಳಪಟ್ಟು ಕೆಳಕಂಡ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಷ್ಟು ತಜ್ಞರ ಮಂಡಲಿಗಳನ್ನು ರಚಿಸತಕ್ಕದ್ದು:-

(ಎ) ಸ್ಥಳೀಯ ಪ್ರದೇಶದಲ್ಲಿನ ಜನರಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಅಥವಾ ಅಂಥ ಬಗೆಯ ಶಿಕ್ಷಣವನ್ನು ಒದಗಿಸುವ ಅಗತ್ಯತೆಯನ್ನು ಪರಿಶೀಲಿಸುವುದು;

(ಬಿ) ಮಾನ್ಯತೆ ನೀಡಿಕೆಗೆ ಯಾವುದೇ ಸಂಸ್ಥೆಗೆ ಅನ್ವಯವಾಗತಕ್ಕ ವಿಶೇಷ ಷರತ್ತುಗಳು ಯಾವುದಾದರೂ ಇದ್ದಲ್ಲಿ ಅವುಗಳನ್ನು ಅಂಥ ಸಂಸ್ಥೆಯು ಈಡೇರಿಸಿದೆಯೇ ಇಲ್ಲವೇ ಎಂಬುದನ್ನು ಪರ್ಯಾಲೋಚಿಸುವುದು;

(ಸಿ) ಮಾನ್ಯತೆ ನೀಡಿಕೆಯ ಷರತ್ತುಗಳಲ್ಲಿ ಮಾರ್ಪಾಟುಗಳನ್ನು ಅಥವಾ ಬದಲಾವಣೆಗಳನ್ನು ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು; ಮತ್ತು

(ಡಿ) ಪ್ರಾಧಿಕಾರವು ಅಥವಾ ಸಕ್ಷಮ ಪ್ರಾಧಿಕಾರವು ಅದಕ್ಕೆ ಕಳುಹಿಸಿ ಕೊಡಬಹುದಾದ ಅಂಥ ಇತರ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸುಗಳನ್ನು ಮಾಡುವುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ರಚಿತವಾದ ತಜ್ಞ ಮಂಡಲಿಯು, ಸದರಿ ಪ್ರಕರಣದ ಮೇರೆಗೆ ನಿಯಮಿಸಲಾದ ನಿಯಮಗಳಿಗನುಸಾರವಾಗಿ, ಸಂದರ್ಭಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ತನ್ನ ವರದಿಯನ್ನು ಅಥವಾ ಹೆಚ್ಚಿನ ವರದಿಯನ್ನು ಸಲ್ಲಿಸತಕ್ಕದ್ದು.

**24. ಹಾಲಿ ಇರುವ ಸಂಸ್ಥೆಗಳಿಗೆ ಮನ್ನಣೆ, ಇತ್ಯಾದಿ.–** (1) 22ನೇ ಪ್ರಕರಣದಲ್ಲಿ ಏನೇ ಇದ್ದರೂ,-

(ಎ) ರಾಜ್ಯ ಸರ್ಕಾರವು ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಯಾವುದೇ ಪ್ರಾಧಿಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ ಅಥವಾ ನಡೆಸುತ್ತಿರುವ ಮತ್ತು ನಿಯಮಿಸಬಹುದಾದ ಷರತ್ತುಗಳಿಗನುಸಾರವಾಗಿ ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ಶಿಕ್ಷಣ ಸಂಸ್ಥೆಗಳು ಈ ಅಧಿನಿಯಮದ ಅಡಿಯಲ್ಲಿ ಮಾನ್ಯತೆ ಪಡೆದಿರುವ ಶೈಕ್ಷಣಿಕ ಸಂಸ್ಥೆಗಳೆಂದು ಭಾವಿಸತಕ್ಕದ್ದು.

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಶೈಕ್ಷಣಿಕ ಸಂಸ್ಥೆಗಳ ಹೊರತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಸ್ಥಾಪಿಸಲಾದ ಮತ್ತು ಮಾನ್ಯತೆ ಪಡೆದ ಹಾಗೂ ನರ್ಸಿಂಗ್ ಮತ್ತು ಅರೆವೈದ್ಯಕೀಯ ವಿಜ್ಞಾನಗಳ ಶಿಕ್ಷಣ ನೀಡುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳು ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳನ್ನು ನಿಯಮಿಸಬಹುದಾದಂಥ ಅವಧಿಯೊಳಗಾಗಿ ಮತ್ತು ವಿಧಾನಕ್ಕನುಸಾರವಾಗಿ ಪಾಲಿಸಿದರೆ ಅವುಗಳನ್ನು ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ಮತ್ತು ಮಾನ್ಯತೆ ಪಡೆದ ಶೈಕ್ಷಣಿಕ ಸಂಸ್ಥೆಗಳೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ದಿನದಂದು ಅಸ್ತಿತ್ವದಲ್ಲಿದ್ದ ಆದರೆ ಅಂಥ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದ ನಿಯಮಗಳಿಗನುಸಾರವಾಗಿ ಮಾನ್ಯತೆ ಪಡೆಯದೆ ಇದ್ದ ಶಿಕ್ಷಣ ನೀಡುತ್ತಿರುವ ಯಾವುದೇ ಖಾಸಗಿ ಶೈಕ್ಷಣಿಕ ಸಂಸ್ಥೆಯು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳಿಗನುಸಾರವಾಗಿ ಅಂಥ ಪ್ರಾರಂಭದ ದಿನದಿಂದ ಅರವತ್ತು ದಿನಗಳೊಳಗಾಗಿ ಮಾನ್ಯತೆಗಾಗಿ ಅರ್ಜಿಯನ್ನು ಸಲ್ಲಿಸಿದ್ದ ಹೊರತು ಅಂಥ ಪ್ರಾರಂಭದ ದಿನದಿಂದ ಶಿಕ್ಷಣ ನೀಡುವುದನ್ನು ನಿಲ್ಲಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು ಸಕ್ಷಮ ಪ್ರಾಧಿಕಾರ ವರ್ಗವು ಅದನ್ನು ಸ್ವೀಕರಿಸಿದ ಅರವತ್ತು ದಿನಗಳೊಳಗಾಗಿ ವಿಲೆ ಮಾಡತಕ್ಕದ್ದು. ಮಾನ್ಯತೆಗಾಗಿ ಸಲ್ಲಿಸಿರುವ ಅರ್ಜಿಯನ್ನು ನಿರಾಕರಿಸಿದ ತರುವಾಯ ಯಾವುದೇ ಅಂಥ ಸಂಸ್ಥೆಯನ್ನು ಯಾವ ವ್ಯಕ್ತಿಯೇ ಆಗಲೀ ನಡೆಸತಕ್ಕದ್ದಲ್ಲ.

**25. ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದು.–** (1) ಯಾವುದೇ ಸ್ಥಳೀಯ ಪ್ರಾಧಿಕಾರವು, ಅಥವಾ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ವರ್ಗವು,-

(ಎ) ಮಾನ್ಯತೆ ನೀಡಿಕೆಯ ಎಲ್ಲ ಅಥವಾ ಯಾವುದೇ ಷರತ್ತುಗಳನ್ನು ಪಾಲಿಸಲು ತಪ್ಪಿದಲ್ಲಿ ಅಥವಾ ಸ್ಥಳಾವಕಾಶ, ಸಲಕರಣೆ, ಪಠ್ಯಕ್ರಮ, ಪಠ್ಯಪುಸ್ತಕ, ಉಪಾಧ್ಯಾಯರ ನೇಮಕಾತಿ, ಶಿಕ್ಷೆ ಮತ್ತು ವಜಾ ಇವುಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರದ ಆದೇಶಗಳನ್ನು ಪಾಲಿಸಲು ತಪ್ಪಿದಲ್ಲಿ;

(ಬಿ) ಮತ, ಜನಾಂಗ, ಜಾತಿ, ಭಾಷೆ ಇವುಗಳ ಆಧಾರದ ಮೇಲೆ ಅಥವಾ ಇವುಗಳ ಪೈಕಿ ಯಾವೊಂದರ ಆಧಾರದ ಮೇಲೆ ಯಾವೊಬ್ಬ ನಾಗರೀಕನಿಗೆ ಪ್ರವೇಶ ನೀಡಲು ನಿರಾಕರಿಸಿದಲ್ಲಿ;

(ಸಿ) ಶಿಕ್ಷಣ ಸಂಸ್ಥೆಯಲ್ಲಿ, ಭಾರತದ ಯಾವುದೇ ನಾಗರೀಕ ವರ್ಗದ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವಂಥ ಅಥವಾ ಆ ವರ್ಗದ ಧರ್ಮಕ್ಕೆ ಅಥವಾ ಧಾರ್ಮಿಕ ನಂಬಿಕೆಗಳಿಗೆ ಅಪಮಾನ ಮಾಡುವಂಥ ಯಾವುದೇ ಪ್ರಚಾರಕ್ಕೆ ಅಥವಾ ಆಚರಣೆಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹ ನೀಡಿದಲ್ಲಿ;

(ಡಿ) ಸೂಕ್ತ ವಿಚಾರಣೆಯ ತರುವಾಯ, ಸಕ್ಷಮ ಪ್ರಾಧಿಕಾರವು ಯಾವ ಶಿಕ್ಷಕನ ಪ್ರಮಾಣ ಪತ್ರವನ್ನು ರದ್ದುಪಡಿಸಿದೆಯೋ ಅಥವಾ ಅಮಾನತುಗೊಳಿಸಿದೆಯೋ ಆ ಯಾವೊಬ್ಬ ಶಿಕ್ಷಕನನ್ನು ನೇಮಿಸಿಕೊಂಡಲ್ಲಿ ಅಥವಾ ಅವನ ನೇಮಕವನ್ನು ಮುಂದುವರಿಸಿದಲ್ಲಿ ಅಥವಾ ಸೂಕ್ತ ವಿಚಾರಣೆಯ ತರುವಾಯ, ಸಕ್ಷಮ ಪ್ರಾಧಿಕಾರವು ಯಾವ ಶಿಕ್ಷಕನು ಶಿಕ್ಷಕನಾಗಿರಲು ಯೋಗ್ಯನಲ್ಲನೆಂದು ಅಥವಾ ಶಿಕ್ಷಕನಾಗಿರುವುದು ಅಪೇಕ್ಷಣೀಯವಲ್ಲವೆಂದು ಪರಿಗಣಿಸಿದೆಯೋ, ಆ

ಶಿಕ್ಷಕನನ್ನು ನೇಮಿಸಿಕೊಂಡಲ್ಲಿ ಅಥವಾ ಅವನ ನೇಮಕವನ್ನು ಮುಂದುವರೆಸಿದಲ್ಲಿ ಅಥವಾ ಶಿಕ್ಷಕನನ್ನು ಯಾವುದೇ ಸಮಂಜಸ ಕಾರಣಗಳಿಲ್ಲದೆಯೇ ತೆಗೆದುಹಾಕಿದಲ್ಲಿ ಅಥವಾ ಈ ಸಂಬಂಧವಾಗಿ ಸಕ್ಷಮ ಪ್ರಾಧಿಕಾರವು ಮಾಡಿದ ಆದೇಶಗಳನ್ನು ಪಾಲಿಸಲು ತಪ್ಪಿದಲ್ಲಿ;

(ಇ) ಶಿಕ್ಷಣಕ್ಕೆ ಅಥವಾ ಸ್ಥಳಾವಕಾಶಕ್ಕೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಅಥವಾ ಆಡಳಿತಕ್ಕೆ ಅಥವಾ ಶಿಸ್ತುಪಾಲನೆಗೆ ಸಂಬಂಧಪಟ್ಟ ಲೋಪದೋಷಗಳನ್ನು, ಸಕ್ಷಮ ಪ್ರಾಧಿಕಾರವು ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಸರಿಪಡಿಸಲು ತಪ್ಪಿದಲ್ಲಿ;

(ಎಫ್) ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮತ್ತು ಆದೇಶಗಳ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ,

– ಸಕ್ಷಮ ಪ್ರಾಧಿಕಾರವು, ಕಾರಣಗಳನ್ನು ಲಿಖಿತದಲ್ಲಿ ದಾಖಲ್ಮಾಡಿ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರ ಆಡಳಿತ ಪರಿಷತ್ತಿಗೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದರ ಅಥವಾ ಯಾವುದೇ ಕ್ರಮ ತೆಗೆದುಕೊಳ್ಳುವುದರ ವಿರುದ್ಧ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ತರುವಾಯ, ಸಂಸ್ಥೆಯ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬಹುದು ಅಥವಾ ಅಗತ್ಯವೆಂದು ಭಾವಿಸಬಹುದಾದಂಥ ಕ್ರಮ ಕೈಗೊಳ್ಳಬಹುದು.

(2) ಯಾವುದೇ ಸ್ಥಳೀಯ ಪ್ರಾಧಿಕಾರದ ಸಂಸ್ಥೆಗೆ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗೆ ಮಂಜೂರು ಮಾಡಿರುವ ಮಾನ್ಯತೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂತೆಗೆದುಕೊಳ್ಳಬೇಕೆಂದು ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರವಾಗಿ ಸಂಸ್ಥೆಯ ಆಡಳಿತ ಪರಿಷತ್ತಿಗೆ ಯಾವುದೇ ಮನವಿಯನ್ನು ಸಲ್ಲಿಸಲು ಒಂದು ತಿಂಗಳ ನೋಟೀಸನ್ನು ಕೊಟ್ಟ ನಂತರ, ಸದರಿ ಸಂಸ್ಥೆಗೆ ಮಂಜೂರು ಮಾಡಿದ ಮಾನ್ಯತೆಯನ್ನು ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳಬಹುದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಮಾನ್ಯತೆ ಪಡೆಯದೆ ಇರುವ ಯಾವುದೇ ಶೈಕ್ಷಣಿಕ ಸಂಸ್ಥೆಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಯಾವ ಸಂಸ್ಥೆಯ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗಿದೆಯೋ ಆ ಯಾವುದೇ ಶಿಕ್ಷಣ ಸಂಸ್ಥೆಗೆ ಕೆಳಕಂಡ ಹಕ್ಕುಗಳು ಇರತಕ್ಕದ್ದಲ್ಲ:–

(ಎ) ರಾಜ್ಯ ನಿಧಿಯಿಂದ ಯಾವುದೇ ಸಹಾಯಾನುದಾನವನ್ನು ಅಥವಾ ಸರ್ಕಾರದಿಂದ ಇತರ ಅರ್ಥಿಕ ನೆರವನ್ನು ಅಥವಾ ಇತರ ಸೌಲಭ್ಯಗಳನ್ನು ಪಡೆಯುವುದು;

(ಬಿ) ವಿವಿಧ ವ್ಯಾಸಂಗ ಕ್ರಮಗಳಲ್ಲಿ ಪ್ರಾಧಿಕಾರವು ನಡೆಸುವ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಕಳುಹಿಸುವುದು ಅಥವಾ ಹಾಜರುಪಡಿಸುವುದು.

## ಅಧ್ಯಾಯ – VI

## ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಪ್ರಾಧಿಕಾರದ ಸಂಸ್ಥೆಗಳು, ಮೊದಲಾದವುಗಳ ವ್ಯವಸ್ಥಾಪಕ ವರ್ಗ

**26. ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯಗಳು.–** (1) ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಥವಾ ಆದೇಶಗಳ ಎಲ್ಲ ಉಪಬಂಧಗಳನ್ನು ಪಾಲಿಸುವುದು ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯವಾಗಿರತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ,–

(ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರವು ಸಂಗ್ರಹಿಸಿದ ಅಥವಾ ಅದಕ್ಕೆ ನೀಡಲಾದ ಅಥವಾ ಹಂಚಿಕೆ ಮಾಡಲಾದ ಎಲ್ಲ ಹಣವನ್ನು, ಶೈಕ್ಷಣಿಕ ಉದ್ದೇಶಗಳಿಗಾಗಿ ಖರ್ಚು ಮಾಡುವಂತೆ ನೋಡಿಕೊಳ್ಳುವುದು; ಮತ್ತು

(ಬಿ) ನಿರ್ದಿಷ್ಟಪಡಿಸಬಹುದಾದ ಅಂಥ ಪ್ರಾಧಿಕಾರಕ್ಕೆ ಮತ್ತು ಅಂಥ ದಿನಾಂಕಕ್ಕೆ ಮೊದಲು ಪ್ರತಿ ವರ್ಷವೂ ಸ್ಥಳೀಯ ಪ್ರಾಧಿಕಾರ ಸಂಸ್ಥೆಯ ಆಡಳಿತಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ವಾರ್ಷಿಕ ಆಯವ್ಯಯ ಅಂದಾಜನ್ನು ಒಪ್ಪಿಸುವುದು ,

– ಸ್ಥಳೀಯ ಪ್ರಾಧಿಕಾರದ ಸಂಸ್ಥೆಯ ವ್ಯವಸ್ಥಾಪಕ ವರ್ಗದ ಕರ್ತವ್ಯವಾಗಿರತಕ್ಕದ್ದು.

**27. ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪನೆ.–** (1) ರಾಜ್ಯ ಸರ್ಕಾರವು ಅಥವಾ ಪ್ರಾಧಿಕಾರವು, ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳ ಸಲುವಾಗಿ ಪೂರ್ವ ಪ್ರಕಟಣೆಯ ತರುವಾಯ ರಚಿಸಬಹುದಾದ ನಿಯಮಗಳ ಅನುಸಾರವಾಗಿ ಹೊರತು ಅಂಥ ಯಾವುವೇ ಸಂಸ್ಥೆಗಳನ್ನು ವ್ಯವಸ್ಥಾಪನೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿಯ ನಿಯಮಗಳಲ್ಲಿ, ಇತರ ವಿಷಯಗಳ ಜೊತೆಗೆ ಈ ಕೆಳಕಂಡವುಗಳೂ ಒಳಗೊಂಡಿರಬಹುದು,-

(ಎ) ಬೋಧಕ ಮತ್ತು ಬೋಧಕೇತರ ನೌಕರರ ಹುದ್ದೆಗಳಿಗೆ ಅರ್ಹತೆಗಳು;

(ಬಿ) ಬೋಧಕ ಮತ್ತು ಬೋಧಕೇತರ ನೌಕರರ ನೌಕರಿ ಭರ್ತಿ ವಿಧಾನ;

(ಸಿ) ಅರ್ಹವಾದ ವೇತನ ಶ್ರೇಣಿಗಳು ಮತ್ತು ಭತ್ಯೆಗಳು;

(ಡಿ) ರಜೆ, ನಿವೃತ್ತಿ ವೇತನ, ಭವಿಷ್ಯನಿಧಿ, ವಿಮೆ ಮತ್ತು ಅಂಥ ಇತರ ಸೌಲಭ್ಯಗಳು;

(ಇ) ನೌಕರರಲ್ಲಿ ಶಿಸ್ತನ್ನು ಪಾಲಿಸುವುದು ಮತ್ತು ಅದನ್ನು ಅವರಲ್ಲಿ ಜಾರಿಗೊಳಿಸುವುದು;

(ಎಫ್) ವ್ಯವಸ್ಥಾಪಕ ವರ್ಗದ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಹೊಣೆಗಾರಿಕೆಗಳು;

(ಜಿ) ಸಂಸ್ಥೆಯ ಕಾರ್ಯದರ್ಶಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು; ಮತ್ತು

(ಎಚ್) ದಾಖಲೆಗಳನ್ನು, ಲೆಕ್ಕಪತ್ರಗಳನ್ನು ಮತ್ತು ಇತರ ವರದಿಗಳ ನಿರ್ವಹಣೆ ಮತ್ತು ಅವುಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಒಪ್ಪಿಸುವುದು.

(3) ಯಾವುದೇ ಶೈಕ್ಷಣಿಕ ಸಂಸ್ಥೆಯು ಪ್ರಾಧಿಕಾರವು ಅನುಮತಿಸಿದ ಮೊತ್ತಕ್ಕೆ ಮೀರಿದ ಶುಲ್ಕವನ್ನು ಅಥವಾ ಯಾವುದೇ ಕಾನೂನಿನಿಂದ ನಿಷೇಧಿಸಲ್ಪಟ್ಟ ಯಾವುದೇ ಫೀಜು ಅಥವಾ ದೇಣಿಗೆಯನ್ನು ಸಂಗ್ರಹಿಸತಕ್ಕದ್ದಲ್ಲ.

(4) ನಿಯಮಿಸಿರುವ ನಿಯಮಗಳಿಗನುಸಾರವಾಗಿ ಆಡಳಿತ ಪರಿಷತ್ತು, ಸಂಸ್ಥೆಯ ಮುಖ್ಯಸ್ಥರನ್ನು ನೇಮಕ ಮಾಡುವ ಮತ್ತು ಅವನ ವಿರುದ್ಧ ಶಿಸ್ತು ಕ್ರಮವನ್ನು ಕೈಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

(5) ಸಂಸ್ಥೆಯ ಆಡಳಿತ ಪರಿಷತ್ತಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ ಅಥವಾ ಸಂಸ್ಥೆಯು ಇರುವ ಸ್ಥಳವು ಬದಲಾದಲ್ಲಿ, ಅದು, ತಾನು ಹೊಸದಾಗಿ ಪ್ರಾರಂಭವಾದ ಸಂಸ್ಥೆ ಎಂಬಂತೆ ಮಾನ್ಯತೆ ಪಡೆಯುವ ಸಲುವಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**28. ಗ್ರಂಥಾಲಯ ಸೇವೆ.-** ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ, ಶಾಲಾ ಹಾಗೂ ಕಾಲೇಜು ಗ್ರಂಥಾಲಯಗಳ ಸ್ಥಾಪನೆಗೆ ಪ್ರಾಧಿಕಾರವು ಸಾಕಷ್ಟು ವ್ಯವಸ್ಥೆ ಮಾಡಲು ಪ್ರಯತ್ನಿಸತಕ್ಕದ್ದು ಮತ್ತು ಅಂಥ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಆ ಗ್ರಂಥಾಲಯಗಳ ಸದುಪಯೋಗ ಪಡೆಯಲು ಅವಶ್ಯಕವಾದ ಅನುಕೂಲಗಳನ್ನು ಒದಗಿಸತಕ್ಕದ್ದು.

## ಅಧ್ಯಾಯ - VII

## ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು

**29. ನೌಕರರ ಅರ್ಹತೆಗಳು ಮತ್ತು ಸೇವಾ ಷರತ್ತುಗಳು.-** ಪ್ರಾಧಿಕಾರವು, ಪೂರ್ವ ಪ್ರಕಟಣೆಯ ನಂತರ, ಮನ್ನಣೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರಿ ಭರ್ತಿ ಮತ್ತು ಸೇವಾ ಷರತ್ತುಗಳನ್ನು ನಿಯಂತ್ರಿಸುವುದಕ್ಕಾಗಿ (ಶಿಸ್ತುಪಾಲನೆಯ ವಿಷಯಕ್ಕೆ ಸಂಬಂಧಿಸಿದ ಹಕ್ಕುಗಳೂ ಸೇರಿದಂತೆ) ವಿನಿಯಮಗಳನ್ನು ರಚಿಸಬಹುದು:

ಪರಂತು, ರಾಜ್ಯ ಸರ್ಕಾರದಿಂದ ನಿರ್ವಹಣಾ ಅನುದಾನವನ್ನು ಪಡೆಯುವ ಶಿಕ್ಷಣ ಸಂಸ್ಥೆಗಳ ನೌಕರರ ನೌಕರಿಭರ್ತಿಗೆ ಕನಿಷ್ಠ ಅರ್ಹತೆಗಳು, ನೌಕರಿ ಭರ್ತಿಯ ವಯಸ್ಸು ಮತ್ತು ನಿವೃತ್ತಿ ಹಾಗೂ ನಿವೃತ್ತಿ ಸೌಲಭ್ಯಗಳು ಅನ್ಯಥಾ ನಿಯಮಿಸಿರುವ ಹೊರತು ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿನ ಸಂವಾದಿ ಪ್ರವರ್ಗಗಳ ನೌಕರರು ಯಾರಾದರೂ ಇದ್ದರೆ ಅವರಿಗೆ ಅನ್ವಯವಾಗುವಂಥವೇ ಆಗಿರತಕ್ಕದ್ದು.

**30. ನೌಕರರ ನೇಮಕಾತಿ.-** 29ನೇ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಅವಶ್ಯಕ ಅರ್ಹತೆಗಳನ್ನು ಹೊಂದಿರದ ಯಾವೊಬ್ಬ ವ್ಯಕ್ತಿಯನ್ನು, ಈ ಅಧಿನಿಯಮವು ಪ್ರಾರಂಭವಾದ ದಿನದಂದು ಮತ್ತು ಅಂದಿನಿಂದ ಅಂಗೀಕಾರ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನೌಕರನನ್ನಾಗಿ ನೇಮಕ ಮಾಡತಕ್ಕದ್ದಲ್ಲ.

**31. ನೌಕರರ ಅನುಸೂಚಿಯನ್ನು ಇಡುವುದು.-** (1) ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು ತನ್ನ ನೌಕರರ ಸಂಖ್ಯೆ, ಪ್ರತಿಯೊಬ್ಬ ನೌಕರನ ಹೆಸರು ಮತ್ತು ವಿದ್ಯಾರ್ಹತೆ, ವೇತನ ಶ್ರೇಣಿ, ಸಂದಾಯದ ವಿಧಾನ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳನ್ನುಳ್ಳ ಒಂದು ಅನುಸೂಚಿಯನ್ನು ಇಡತಕ್ಕದ್ದು ಮತ್ತು ಪ್ರಾಧಿಕಾರವು ನಿಯಮಿಸಬಹುದಾದ ಅಂಥ ದಿನಾಂಕದೊಳಗೆ ಪ್ರತಿವರ್ಷವು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾದ ಮೂರು ತಿಂಗಳೊಳಗಾಗಿ ಮತ್ತು ಅಂಥ ಅನುಸೂಚಿಯಲ್ಲಿ ಮಾರ್ಪಾಡು ಮಾಡಲಾದ ಅನಂತರದ ಅಂಥ ಅವಧಿಯೊಳಗಾಗಿ, ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಪಟ್ಟಿಯ ಅಥವಾ ಸಂದರ್ಭಾನುಸಾರ ಅದರಲ್ಲಿ ಮಾಡಲಾದ ಮಾರ್ಪಾಡುಗಳ ಪ್ರತಿಯೊಂದನ್ನು ಪ್ರಾಧಿಕಾರಕ್ಕೆ ಅಥವಾ ಈ ಉದ್ದೇಶಕ್ಕಾಗಿ ಅಧಿಸೂಚಿಸಬಹುದಾದ ಅಂಥ ಇತರ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ತತ್‍ಕಾಲದಲ್ಲಿ ಜಾರಿಯಲ್ಲಿರುವ ನೇಮಕಗಳ ಅನುಸೂಚಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಯ ಕಛೇರಿಯಲ್ಲಿ ಇರಿಸತಕ್ಕದ್ದು ಮತ್ತು ಕಛೇರಿಯ ಕೆಲಸದ ವೇಳೆಯಲ್ಲಿ ಆ ಖಾಸಗಿ ಶಿಕ್ಷಣ ಸಂಸ್ಥೆಯ ಯಾವೊಬ್ಬ ನೌಕರನು ಉಚಿತವಾಗಿ ಪಡೆದು ಅದನ್ನು ಪರಿಶೀಲಿಸಲು ಅವಕಾಶವಿರತಕ್ಕದ್ದು. ಬೋಧಕ ಸಿಬ್ಬಂದಿಯ ಹೆಸರು ಮತ್ತು ವಿದ್ಯಾರ್ಹತೆಗಳನ್ನು ಸಂಸ್ಥೆಯಲ್ಲಿ ಎಲ್ಲರಿಗೂ ಕಾಣುವ ಮುಖ್ಯ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**32. ನಡತೆ ಸಂಹಿತೆ.–** (1) ಖಾಸಗಿ ಶಿಕ್ಷಣ ಸಂಸ್ಥೆಯ ಪ್ರತಿಯೊಬ್ಬ ನೌಕರನು ನಿಯಮಿಸಲಾದ ನಡತೆ ಸಂಹಿತೆಗೆ ಬದ್ಧನಾಗಿರತಕ್ಕದ್ದು ಮತ್ತು ಅವನು ಅದರಲ್ಲಿನ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ ಆತನು ನಿಯಮಿಸಲಾದ ಶಿಸ್ತು ಕ್ರಮಕ್ಕೆ ಗುರಿಯಾಗಲು ಬದ್ಧನಾಗಿರತಕ್ಕದ್ದು.

(2) ಆಡಳಿತ ಸಮಿತಿಯು, ಪ್ರಾಧಿಕಾರ ಅಥವಾ ಪ್ರಾಧಿಕಾರವು ಈ ಸಂಬಂಧದಲ್ಲಿ ಅಧಿಕಾರ ನೀಡಿದ ಯಾವೊಬ್ಬ ಪ್ರಾಧಿಕಾರಿಯು, ನೌಕರರು ಪಾಲಿಸತಕ್ಕ ಮಾದರಿ ನಡತೆ ಪ್ರಮಾಣಗಳನ್ನು ಸಹ ನಿಯಮಿಸಬಹುದು, ಪರಂತು, ಅವುಗಳು (1)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದವುಗಳಿಗೆ ಅಸಂಗತವಾಗಿರತಕ್ಕದ್ದಲ್ಲ.

## ಅಧ್ಯಾಯ – VIII

## ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ

**33. ಆಡಳಿತ ಪರಿಷತ್ತಿನ ನಡತೆ ಸಂಹಿತೆ.–** ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ತರುವಾಯ, ನಿಯಮಿಸಬಹುದಾದ ಅಂಥ ನಡತೆ ಸಂಹಿತೆಯು, ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿಗೆ ಅನ್ವಯವಾಗತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿ ಉದ್ಭವಿಸುವ ಮತ್ತು ಮೇಲೆ ಹೇಳಿದಂಥ ನಡತೆ ಸಂಹಿತೆಯಲ್ಲಿ ಒಳಗೊಳ್ಳದೆ ಇರುವಂಥ ವಿಷಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನಿಯಮಿಸಿದ ನಡತೆ ಸಂಹಿತೆಗೆ ಅಸಂಗತವಾಗದಂತೆ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆದು ಆಡಳಿತ ಪರಿಷತ್ತು ಸಿದ್ಧಪಡಿಸಿದ ನಡತೆ ಸಂಹಿತೆಯು ಅದಕ್ಕೆ ಅನ್ವಯವಾಗತಕ್ಕದ್ದು ಮತ್ತು ಅದನ್ನು ಸಕ್ಷಮ ಪ್ರಾಧಿಕಾರಿಗೆ ಮಾಹಿತಿಗಾಗಿ ಕಳಿಸತಕ್ಕದ್ದು.

**34. ಸ್ವತ್ತುಗಳ ಪಟ್ಟಿಯನ್ನು ಒದಗಿಸುವುದು.–** (1) ಪ್ರತಿಯೊಂದು ಖಾಸಗಿ ಶಿಕ್ಷಣ ಸಂಸ್ಥೆಯು, ತನ್ನ ಒಡೆತನದಲ್ಲಿರುವ ಅಥವಾ ಅದರ ಸ್ವಾಧೀನದಲ್ಲಿರುವ ಚರ ಹಾಗೂ ಸ್ಥಿರ ಸ್ವತ್ತುಗಳ ಪಟ್ಟಿಯನ್ನು ಇಡತಕ್ಕದ್ದು.

(2) ಆಡಳಿತ ವರ್ಗವು, ನಿಯಮಿಸಿದ ದಿನಾಂಕದಂದು ಅಥವಾ ದಿನಾಂಕದೊಳಗಾಗಿ, ನಿಯಮಿಸಿದ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಅಂಥ ಪಟ್ಟಿಯ ಒಂದು ಪ್ರತಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

**35. ನಿಧಿ, ಮುಂತಾದವುಗಳ ಬಳಕೆ.–** (1) ಖಾಸಗಿ ಶಿಕ್ಷಣ ಸಂಸ್ಥೆಯ ಪರವಾಗಿ ಆಡಳಿತ ವರ್ಗವು ಸಂಗ್ರಹಿಸಿದ ಎಲ್ಲ ಹಣ, ಸ್ವೀಕರಿಸಿದ ಅನುದಾನ ಮತ್ತು ಹೊಂದಿರುವ ಎಲ್ಲ ಸ್ವತ್ತುಗಳನ್ನು ನಿಯಮಿಸಲಾದ ಉದ್ದೇಶಗಳಿಗೆ ಮತ್ತು ಯಾವ ಉದ್ದೇಶಗಳಿಗಾಗಿ ಅವುಗಳನ್ನು ಕೊಡಲಾಗಿದೆಯೋ ಆ ಉದ್ದೇಶಗಳಿಗಾಗಿ ಬಳಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಆ ಖಾಸಗಿ ಶಿಕ್ಷಣ ಸಂಸ್ಥೆಯು ಲೆಕ್ಕಪತ್ರಗಳನ್ನು ಇಡತಕ್ಕದ್ದು.

(2) ಖಾಸಗಿ ಶಿಕ್ಷಣ ಸಂಸ್ಥೆಯು ತನ್ನ ನಿಧಿಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಠೇವಣಿ ಇಡತಕ್ಕದ್ದು.

**36. ಸಾಕಷ್ಟು ನೋಟೀಸು ಕೊಡದೆ ಖಾಸಗಿ ಸಂಸ್ಥೆಗಳನ್ನು ಮುಚ್ಚದಿರುವುದು ಇತ್ಯಾದಿ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಯಾವುದೇ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು ಆ ಶಿಕ್ಷಣ ಸಂಸ್ಥೆಯನ್ನು ಮುಚ್ಚುವ ಬಗ್ಗೆ ಅಥವಾ ಮುಂದುವರಿಸದಿರುವ ಬಗ್ಗೆ, ಆ ಕುರಿತು ಸಕ್ಷಮ ಪ್ರಾಧಿಕಾರವು ಅಧಿಕೃತಗೊಳಿಸಿದ ಅಧಿಕಾರಿಗೆ ಒಂದು ಶೈಕ್ಷಣಿಕ ವರ್ಷಕ್ಕೆ ಕಡಿಮೆಯಲ್ಲದ ಅವಧಿಗೆ ಮುಂಚಿತವಾಗಿ ನೋಟೀಸನ್ನು ಕೊಡದೆ ಆ ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚತಕ್ಕದ್ದಲ್ಲ ಅಥವಾ ಮುಂದುವರಿಸದಿರತಕ್ಕದ್ದಲ್ಲ.

(2) ಮನ್ನಣೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯನ್ನು ಮುಚ್ಚಿದ ಅನಂತರ, ಸರ್ಕಾರವು ಅದಕ್ಕೆ ಕೊಟ್ಟ ಸಹಾಯಾನುದಾನಕ್ಕೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಅದರ ಎಲ್ಲ ಸ್ವತ್ತುಗಳು ರಾಜ್ಯ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

## ಅಧ್ಯಾಯ – IX

## ದಂಡನೆಗಳು

**37. ರ್‍ಯಾಗಿಂಗ್ ಮಾಡಿದ್ದಕ್ಕಾಗಿ ದಂಡನೆ.–** (1) ವಿಶ್ವವಿದ್ಯಾನಿಲಯದ ಅಥವಾ ಕೇಂದ್ರ ಸರ್ಕಾರದ ನೇರ ಆಡಳಿತ ನಿರ್ವಹಣೆಯಲ್ಲಿರುವ ಸಂಸ್ಥೆಯೂ ಸೇರಿದಂತೆ ಒಂದು ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿರುವ ಯಾವೊಬ್ಬ ವ್ಯಕ್ತಿಯು ರ್‍ಯಾಗಿಂಗ್ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣವನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**38. ನೋಂದಣಿಯಾಗದ ಶಿಕ್ಷಣ ಸಂಸ್ಥೆಗಳು ಮುಂತಾದುವನ್ನು ಸ್ಥಾಪಿಸಿದ್ದಕ್ಕಾಗಿ ದಂಡನೆ.–** ಯಾವೊಬ್ಬ ವ್ಯಕ್ತಿಯು, 22ನೇ ಪ್ರಕರಣವನ್ನು ಉಲ್ಲಂಘಿಸಿ ಅಥವಾ 25ನೇ ಪ್ರಕರಣದ ಅಡಿಯಲ್ಲಿ ಸಂಸ್ಥೆಯ ನೋಂದಣಿಯನ್ನು ನಿರಾಕರಿಸಿದ ತರುವಾಯ ಅಥವಾ ಸಂದರ್ಭಾನುವಾಗಿ ನೋಂದಣಿಯನ್ನು ರದ್ದುಗೊಳಿಸಿದ ತರುವಾಯ, ಅಂಥ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ ಅಥವಾ ನಿರ್ವಹಿಸಿದಲ್ಲಿ ಅಥವಾ ನಡೆಸಿಕೊಂಡು ಬಂದಲ್ಲಿ, ಅಪರಾಧ ನಿರ್ಣಯವಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಆದರೆ, ಆರು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯ ಕಾರಾವಾಸದಿಂದ ಹಾಗೂ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಆದರೆ, ಒಂದು ಸಾವಿರ ರೂಪಾಯಿಗೆ ಕಡಿಮೆಯಲ್ಲದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**39. 27ನೇ ಪ್ರಕರಣವನ್ನು ಉಲ್ಲಂಘಿಸಿ ಹಣ ಸಂಗ್ರಹಿಸುವುದಕ್ಕಾಗಿ ದಂಡನೆ.–** 27ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಶಿಕ್ಷಣ ಸಂಸ್ಥೆಯು, ಹಣ ಸಂಗ್ರಹಿಸುತ್ತಿರುವುದಾಗಿ ಕಂಡುಬಂದಲ್ಲಿ, ಅಂಥ ಸಂಗ್ರಹಣೆಯ ಕಾಲದಲ್ಲಿ ಸಂಸ್ಥೆಯ ಆಡಳಿತ ಪ್ರಭಾರವನ್ನು ಹೊಂದಿದ್ದ ಮತ್ತು ಆ ಬಗ್ಗೆ ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಅಪರಾಧ ನಿರ್ಣಯವಾದ ತರುವಾಯ ಯಾರಿಂದ ಹಣ ಸಂಗ್ರಹಿಸಿತ್ತೋ ಅಂಥ ವ್ಯಕ್ತಿಗೆ ಹಾಗೆ ಸಂಗ್ರಹಿಸಿದ ಹಣವನ್ನು ಸಂಸ್ಥೆಯು ಮರು ಸಂದಾಯ ಮಾಡತಕ್ಕದ್ದು.

**40. ಆಡಳಿತ ಪರಿಷತ್ತು ನಡತೆ ಸಂಹಿತೆಯನ್ನು ಉಲ್ಲಂಘಿಸಿದ್ದಕ್ಕಾಗಿ ದಂಡನೆ.–** ಯಾವುದೇ ಆಡಳಿತ ಪರಿಷತ್ತು, 33ನೇ ಪ್ರಕರಣದಲ್ಲಿ ನಿಯಮಿಸಲಾದ ಯಾವುದೇ ನಡತೆ ಸಂಹಿತೆಯನ್ನು ಉದ್ದೇಶಪೂರ್ವಕವಾಗಿ ಅಥವಾ ತಿಳಿದೂ ತಿಳಿದೂ ಉಲ್ಲಂಘಿಸಿದಲ್ಲಿ, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಕೈಗೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ, ಅಪರಾಧ ನಿರ್ಣಯವಾದ ತರುವಾಯ ಅದರ ಪ್ರತಿಯೊಬ್ಬ ಸದಸ್ಯನು ಅಂಥ ಪ್ರತಿಯೊಂದು ಉಲ್ಲಂಘನೆಗಾಗಿ ಐದು ನೂರು ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**41. ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ನೋಟೀಸನ್ನು ಕೊಡಲು ತಪ್ಪಿರುವುದಕ್ಕಾಗಿ ದಂಡನೆ.–** ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಯ ಆಡಳಿತ ಪರಿಷತ್ತು, 36ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾಗಿರುವ ನೋಟೀಸನ್ನು ಕೊಡಲು ತಪ್ಪಿದಲ್ಲಿ ಅದರ ಪ್ರತಿಯೊಬ್ಬ ಸದಸ್ಯನು ಅಪರಾಧ ನಿರ್ಣಯವಾದ ನಂತರ, ಎರಡು ತಿಂಗಳವರೆಗೆ ವಿಸ್ತರಿಸಬಹುದಾದ ಸಾದಾ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಹಾಗೆ ತಪ್ಪು ಮಾಡಿದ ಪ್ರತಿ ದಿನಕ್ಕೆ ಐವತ್ತು ರೂಪಾಯಿ ಜುಲ್ಮಾನೆಯಿಂದಲೂ ದಂಡಿತನಾಗತಕ್ಕದ್ದು.

**42. ಅಪರಾಧದ ಬಗ್ಗೆ ಉಪಬಂಧಿಸಿರದ ಜುಲ್ಮಾನೆಗಳು.–** ಈ ಅಧಿನಿಯಮದಲ್ಲಿ ಒಳಗೊಂಡಿರುವ ಈ ಮೊದಲಿನ ಉಪಬಂಧಗಳ ಅಡಿಯಲ್ಲಿ ದಂಡನೀಯವಾದುವುಗಳನ್ನು ಹೊರತುಪಡಿಸಿ, ಯಾವೊಬ್ಬ ವ್ಯಕ್ತಿಯು ಯಾವುದೇ ಇತರ ನಿಯಮಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಯತ್ನಿಸುವ ಅಥವಾ ಉಲಂಘಿಸಲು ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಅಂಥ ಪ್ರತಿಯೊಂದು ಉಲ್ಲಂಘನೆಗಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಈ ಅಧಿನಿಯಮ ಅಥವಾ ನಿಯಮಗಳನ್ನು ಉಲ್ಲಂಘಿಸುವ ಅವಧಿಯಲ್ಲಿ ಅಪರಾಧವು ಮುಂದುವರೆದಿರುವ ಅವಧಿಯಲ್ಲಿ ಒಂದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯನ್ನು ವಿಧಿಸತಕ್ಕದ್ದು.

**43. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮದ ಯಾವುದೇ ಉಪಬಂಧಗಳ ವಿರುದ್ಧ ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಆ ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಆಡಳಿತದ ಪ್ರಭಾರವನ್ನು ಹೊಂದಿದ್ದ, ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕುದು ಮತ್ತು ಅವರು ತಮ್ಮ ವಿರುದ್ಧ ಕೈಗೊಳ್ಳಲಾಗುವ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆ ವಹಿಸಿದ್ದನೆಂದು ಅಂಥ ಯಾವೊಬ್ಬ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಯಾವುದೇ ಅಂಥ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಮತ್ತು ಆ ಅಪರಾಧವು ಆ ಕಂಪನಿಯ ಯಾವೊಬ್ಬ ನಿರ್ದೇಶಕನ ಅಥವಾ ವ್ಯವಸ್ಥಾಪನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದರೆ ಅಥವಾ ಆ ಅಪರಾಧವು

ಅವರ ಯಾವುದೇ ನಿರ್ಲಕ್ಷ್ಯತೆಯಿಂದ ಆಗಿದೆಯೆಂದು ಆರೋಪಿಸಬಹುದಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನ ವಿರುದ್ಧ ಕೈಗೊಳ್ಳಲಾಗುವ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ) ಕಂಪನಿ ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ನ್ಯಾಸ, ಫರ್ಮು, ಸಂಘ ಅಥವಾ ವ್ಯಕ್ತಿಗಳ ಇತರ ಸಂಸ್ಥೆ - ಇವುಗಳನ್ನು ಒಳಗೊಳ್ಳುತ್ತದೆ; ಮತ್ತು

(ಬಿ) (i) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಪಾಲುದಾರ;

(ii) ಸಂಘ, ನ್ಯಾಸ ಅಥವಾ ವ್ಯಕ್ತಿಗಳ ಇತರ ಸಂಸ್ಥೆಗಳ ಸಂಬಂಧದಲ್ಲಿ ನಿರ್ದೇಶಕ ಎಂದರೆ, ಸಂಘದ, ನ್ಯಾಸದ ಅಥವಾ ಇತರ ಸಂಸ್ಥೆಯ ನಿಯಮಗಳ ಅಡಿಯಲ್ಲಿ, ಸಂಘದ, ನ್ಯಾಸದ ಅಥವಾ ಸಂದರ್ಭಾನುಸಾರ ಇತರ ಸಂಸ್ಥೆಯ ಆಡಳಿತ ನಿರ್ವಹಣೆಯ ಕಾರ್ಯವನ್ನು ವಹಿಸಿ ಕೊಡಲಾಗಿರುವ ವ್ಯಕ್ತಿ.

**44. ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವ ಅಧಿಕಾರಿಗೆ ಅಥವಾ ಇನ್ನಿತರ ವ್ಯಕ್ತಿಗೆ ಅಡ್ಡಿಯುಂಟು ಮಾಡಿದ್ದಕ್ಕೆ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸರ್ಕಾರದ ಅಧಿಕಾರಿಗೆ ಪ್ರದತ್ತವಾದ ಅಧಿಕಾರವನ್ನು ಆ ಅಧಿಕಾರಿಯು ಚಲಾಯಿಸುವಾಗ ಅಥವಾ ಆ ಅಧಿಕಾರಿಗೆ ಒಪ್ಪಿಸಿರುವ ಪ್ರಕಾರ್ಯವನ್ನು ಆ ಅಧಿಕಾರಿಯು ನಿರ್ವಹಿಸುವಾಗ ಅಥವಾ ಅಂಥ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಪ್ರಕಾರ್ಯವನ್ನು ನಿರ್ವಹಿಸಲು ಅಂಥ ಅಧಿಕಾರಿಗೆ ಕಾನೂನು ಸಮ್ಮತವಾಗಿ ನೆರವಾಗುತ್ತಿರುವ ಯಾವೊಬ್ಬ ಇತರ ವ್ಯಕ್ತಿಗೆ ಅಡ್ಡಿಯುಂಟು ಮಾಡುವ ಯಾವೊಬ್ಬ ವ್ಯಕ್ತಿಯು ಅಥವಾ ಆ ಅಧಿಕಾರಿಯು ಅಥವಾ ಆ ವ್ಯಕ್ತಿಯು ಕಾನೂನು ಸಮ್ಮತವಾಗಿ ನೀಡಿದ ನಿರ್ದೇಶನಗಳನ್ನು ಪಾಲಿಸಲು ತಪ್ಪಿದ ಯಾವೊಬ್ಬ ವ್ಯಕ್ತಿಯು ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**45. ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕೃತ್ಯಕ್ಕಾಗಿ ರಾಜ್ಯ ಸರ್ಕಾರದ ಅಥವಾ ಯಾವುದೇ ಪ್ರಾಧಿಕಾರದ, ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ ಅನ್ನು ಅಥವಾ ಇತರ ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**46. ತನಿಖೆ ಹಾಗೂ ಅಪರಾಧಗಳ ಸಂಜ್ಞಾನ.–** ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅಥವಾ ಅಂಥ ಯಾವುದೇ ಅಪರಾಧದ ದುಷ್ಪ್ರೇರಣೆಯ ಬಗ್ಗೆ ಸಕ್ಷಮ ಪ್ರಾಧಿಕಾರವು ನೀಡಿದ ದೂರಿನ ಮೇಲೆ ಹೊರತು ಅಥವಾ ಆ ಪ್ರಾಧಿಕಾರದ ಪೂರ್ವ ಮಂಜೂರಾತಿಯನ್ನು ಪಡೆದ ಹೊರತು ಸಂಜ್ಞಾನವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**47. ಅಪರಾಧಗಳ ದುಷ್ಪ್ರೇರಣೆಗಾಗಿ ದಂಡನೆ.–** ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧ ಮಾಡುವಂತೆ ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಅಂಥ ಅಪರಾಧಕ್ಕಾಗಿ ಉಪಬಂಧಿಸಲಾಗಿರುವ ದಂಡನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ - X

## ಪ್ರಾಧಿಕಾರದ ನಿಧಿ

**48. ಪ್ರಾಧಿಕಾರದ ನಿಧಿ.–** (1) ಪ್ರಾಧಿಕಾರದ ನಿಧಿ ಎಂದು ಕರೆಯಲಾಗುವ ಒಂದು ನಿಧಿಯು ಇರತಕ್ಕದ್ದು.

(2) ಈ ಮುಂದಿನವುಗಳು ಪ್ರಾಧಿಕಾರದ ನಿಧಿಯ ಭಾಗವಾಗತಕ್ಕದ್ದು ಅಥವಾ ಅದಕ್ಕೆ ಸಂದಾಯವಾಗತಕ್ಕದ್ದು ಎಂದರೆ:–

(i) ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ, ನಿಗಮಿತವಾಗಿರುವ ಅಥವಾ ನಿಗಮಿತವಾಗಿಲ್ಲದಿರುವ ಯಾವುದೇ ನಿಕಾಯ ಅಥವಾ ಯಾವೊಬ್ಬ ವ್ಯಕ್ತಿಯು ನೀಡಿದ ಎಲ್ಲ ಅನುದಾನಗಳು, ಧನ ಸಹಾಯಗಳು, ದೇಣಿಗೆಗಳು ಮತ್ತು ದಾನಗಳು;

(ii) ಯಾವುದೇ ಮೂಲದಿಂದಾಗಲಿ ಪ್ರಾಧಿಕಾರದಿಂದ ಅಥವಾ ಪ್ರಾಧಿಕಾರದ ಪರವಾಗಿ ಸ್ವೀಕರಿಸಲಾದ ಎಲ್ಲ ಇತರ ಮೊತ್ತಗಳು; ಮತ್ತು

(iii) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅರೆ ವೈದ್ಯಕೀಯ ಪರೀಕ್ಷಾ ಮಂಡಳಿ ಮತ್ತು ನರ್ಸಿಂಗ್ ಪರೀಕ್ಷಾ ಮಂಡಳಿಯ ನಿಧಿ.

(3) ರಾಜ್ಯ ಸರ್ಕಾರದಿಂದ ಅನ್ಯಥಾ ನಿರ್ದೇಶಿತವಾಗಿದ್ದ ಹೊರತು, ನಿಧಿಗೆ ಜಮೆಯಾದ ಎಲ್ಲ ಹಣವನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೊಡಗಿಸತಕ್ಕದ್ದು.

(4) ಪ್ರಾಧಿಕಾರದ ಕಾರ್ಯನಿರ್ವಹಣಾ ನಿರ್ದೇಶಕನಿಗೆ ಮತ್ತು ಇತರ ಅಧಿಕಾರಿಗಳು ಮತ್ತು ನೌಕರರಿಗೆ ಸಂದಾಯ ಮಾಡಬೇಕಾದ ವೇತನಗಳು, ಭತ್ಯೆಗಳು ಮತ್ತು ನಿವೃತ್ತಿ ವೇತನಗಳನ್ನು ಒಳಗೊಂಡಂತೆ ಪ್ರಾಧಿಕಾರದ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

**49. ಯೋಜನೆ ಮತ್ತು ಕಾರ್ಯಕ್ರಮಕ್ಕೆ ಹಂಚಿಕೆ.–** ರಾಜ್ಯ ಸರ್ಕಾರವು, ಪ್ರಾಧಿಕಾರದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ರಾಜ್ಯದ ವಾರ್ಷಿಕ ಯೋಜನೆಯಲ್ಲಿ ಪ್ರಾಧಿಕಾರಕ್ಕೆ ಹಣಕಾಸು ಹಂಚಿಕೆಯನ್ನು ಮಾಡತಕ್ಕದ್ದು.

**50. ರಾಜ್ಯ ಸರ್ಕಾರದಿಂದ ಅನುದಾನ.–** ಪ್ರಾಧಿಕಾರವು ತನ್ನದೇ ಸ್ವಂತ ನಿಧಿಯನ್ನು ಉತ್ಪಾದಿಸಲು ಅಸಮರ್ಥವಾದಾಗ ಮಾತ್ರವೇ ಸರ್ಕಾರವು ಪ್ರಾಧಿಕಾರಕ್ಕೆ ಅನುದಾನ ನೀಡಬಹುದು.

**51. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ.–** (1) ಪ್ರಾಧಿಕಾರದ ನಿಧಿಯ ವರಮಾನದ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿಸಬಹುದಾದ ಅಂಥ ನಿಯಮಗಳಿಗನುಸಾರವಾಗಿ ಇಡತಕ್ಕದ್ದು.

(2) ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ಸಿದ್ಧಪಡಿಸತಕ್ಕದ್ದು.

(3) ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ಕನಿಷ್ಠ ಮೂರು ವರ್ಷಗಳಿಗೊಮ್ಮೆ ರಾಜ್ಯ ಸರ್ಕಾರವು ನೇಮಿಸಬಹುದಾದ ಅಂಥ ಲೆಕ್ಕಪರಿಶೋಧಕನು ಮಾಡತಕ್ಕದ್ದು.

(4) ಲೆಕ್ಕಪರಿಶೋಧಕನಿಗೆ ಲೆಕ್ಕಪರಿಶೋಧನೆಯ ಉದ್ದೇಶಗಳಿಗಾಗಿ, ಪ್ರಾಧಿಕಾರದ ಎಲ್ಲ ಲೆಕ್ಕ ಪತ್ರಗಳು ಮತ್ತು ಇತರ ದಾಖಲೆಗಳನ್ನು ನೋಡಲು ಅವಕಾಶವಿರತಕ್ಕದ್ದು.

(5) ಪ್ರಾಧಿಕಾರವು ಲೆಕ್ಕಪರಿಶೋಧನೆಗೆ ನಿಯಮಿಸಬಹುದಾದ ಅಂಥ ಚಾರ್ಜುಗಳನ್ನು ತನ್ನ ನಿಧಿಯಿಂದ ಸಂದಾಯ ಮಾಡತಕ್ಕದ್ದು.

(6) ಪ್ರಾಧಿಕಾರವು, ಲೆಕ್ಕಪರಿಶೋಧಕನಿಂದ ವರದಿಯನ್ನು ಸ್ವೀಕರಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಲೆಕ್ಕಪತ್ರಗಳ ವಾರ್ಷಿಕ ವಿವರಣೆಯ ಒಂದು ಪ್ರತಿಯನ್ನು ಲೆಕ್ಕ ಪರಿಶೋಧಕನ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಣೆಯು ಪ್ರಕಟವಾಗುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು ಲೆಕ್ಕಪರಿಶೋಧಕನ ವರದಿಯನ್ನು ಪರಿಶೀಲಿಸಿದ ತರುವಾಯ ಪ್ರಾಧಿಕಾರಕ್ಕೆ ತಾನು ಸೂಕ್ತವೆಂದು ಭಾವಿಸುವ ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

## ಅಧ್ಯಾಯ - XI

## ಸಂಕೀರ್ಣ

**52. ವರದಿ.–** ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಅಂಥ ನಮೂನೆಯಲ್ಲಿ ಮತ್ತು ಅಂಥ ಅವಧಿಯ ಅಂತರದಲ್ಲಿ ರಾಜ್ಯ ಸರ್ಕಾರಕ್ಕೆ ನಿಯಮಿಸಲಾದ ವರದಿಯನ್ನು ಸಲ್ಲಿಸತಕ್ಕದ್ದು.

**53. ಪ್ರಾಧಿಕಾರದ ಆಯವ್ಯಯ ಪತ್ರ.–** ಪ್ರಾಧಿಕಾರವು ಪ್ರತಿವರ್ಷ ಮುಂಬರುವ ಏಪ್ರಿಲ್ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ಹಣಕಾಸು ವರ್ಷಕ್ಕಾಗಿ ತನ್ನ ವರಮಾನ ಮತ್ತು ವೆಚ್ಚದ ಆಯವ್ಯಯ ಅಂದಾಜನ್ನು ನಿಯಮಿಸಬಹುದಾದ ಅಂಥ ದಿನಾಂಕಕ್ಕೆ ಮೊದಲು ಮತ್ತು ಅಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**54. ಅಪೀಲುಗಳು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ಅಧಿಕಾರಿಯು ಅಥವಾ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಅಥವಾ ಯಾವುದೇ ಆಡಳಿತ ಪರಿಷತ್ತು ತೊಂದರೆಗೊಳಗಾದರೆ, ನಿಯಮಿಸಲಾದ ಅವಧಿಯೊಳಗಾಗಿ ವೈದ್ಯಕೀಯ ಶಿಕ್ಷಣದ ಪ್ರಭಾರದಲ್ಲಿರುವ ಸಚಿವರಿಗೆ ಅಪೀಲನ್ನು ಸಲ್ಲಿಸಬಹುದು.

**55. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ.–** (1) ಯಾವ ವ್ಯವಹರಣೆಯಲ್ಲಿ ಮಧ್ಯಸ್ಥಗಾರನಿಗೆ ಒಪ್ಪಿಸಲು ಅಥವಾ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಲು ಉಪಬಂಧಿಸಿರುವುದಿಲ್ಲವೋ ಅಂಥ ವ್ಯವಹರಣೆಗೆ ಸಂಬಂಧಪಟ್ಟಂತೆ ಯಾವುದೇ ಆಡಳಿತಾತ್ಮಕ ಅಥವಾ ನ್ಯಾಯಿಕ ಸ್ವರೂಪದ ತೀರ್ಮಾನದ ಅಥವಾ ಆದೇಶದ ಕ್ರಮಬದ್ಧತೆ, ಸರಿತನ, ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಮನವರಿಕೆ ಮಾಡಿಕೊಳ್ಳಲು ರಾಜ್ಯ ಸರ್ಕಾರವು ತಾನಾಗಿಯೇ ಆಗಲಿ ಅಥವಾ

ಹಿತಾಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲಾಗಲಿ ಅಂಥ ತೀರ್ಮಾನ ಅಥವಾ ಆದೇಶಕ್ಕೆ ಸಂಬಂಧ ಪಟ್ಟಂಥ ಶಿಕ್ಷಣ ಸಂಸ್ಥೆಯ ಅಥವಾ ಯಾವುದೇ ಪ್ರಾಧಿಕಾರದ ಅಧಿಕಾರಿಯ ಅಥವಾ ವ್ಯಕ್ತಿಯ ದಾಖಲೆಯನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಅಂಥ ತೀರ್ಮಾನವನ್ನು ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕೆಂದು, ರದ್ದುಗೊಳಿಸಬೇಕೆಂದು ಅಥವಾ ವಿಪರ್ಯಾಯಗೊಳಿಸಬೇಕೆಂದು, ಮರುಪರಿಶೀಲನೆಗಾಗಿ ಕಳಿಸಿಕೊಡಬೇಕೆಂದು ಸರ್ಕಾರಕ್ಕೆ ಕಂಡುಬರುವ ಯಾವುದೇ ಸಂದರ್ಭದಲ್ಲಿ, ಅದು ತದನುಸಾರವಾಗಿ ಆದೇಶವನ್ನು ಹೊರಡಿಸಬಹುದು:

ಪರಂತು, ರಾಜ್ಯ ಸರ್ಕಾರವು, ಯಾವೊಬ್ಬ ಪಕ್ಷಕಾರರನ್ನು ಪ್ರತಿಕೂಲವಾಗಿ ಬಾಧಿಸುವಂಥ ಯಾವುದೇ ಆದೇಶವನ್ನು, ಆ ಪಕ್ಷಕಾರನಿಗೆ ತನ್ನ ಅಹವಾಲನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ಹೊರತು ಹೊರಡಿಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ಯಾವುದೇ ತೀರ್ಮಾನ ಅಥವಾ ಆದೇಶದ ಬಗ್ಗೆ ಅಧಿಕಾರಗಳನ್ನು ಚಲಾಯಿಸುವವರೆಗೆ, ಯಾವುದೇ ಅಂಥ ತೀರ್ಮಾನದ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

(3) (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಬೇಕಾದ ಪ್ರತಿಯೊಂದು ಅರ್ಜಿಯನ್ನು ನಿಯಮಿಸಬಹುದಾದ ಅಂಥ ಅವಧಿಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಫೀಜಿನೊಂದಿಗೆ ಸಲ್ಲಿಸತಕ್ಕದ್ದು.

**56. ಪುನರಾವಲೋಕನ.–** (1) ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ ಕಾರ್ಯನಿರ್ವಹಣಾ ನಿರ್ದೇಶಕನು ಯಾವುದೇ ಸಮಯದಲ್ಲಿ ತಾವಾಗಿಯೇ ಆಗಲಿ ಅಥವಾ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಆದೇಶವನ್ನು ಹೊರಡಿಸಿದ ತೊಂಭತ್ತು ದಿನಗಳ ಒಳಗಾಗಿ ಹಿತಾಸಕ್ತ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆಯಾಗಲಿ ಒಂದು ವೇಳೆ ಆ ಯಾವುದೇ ಆದೇಶವನ್ನು ಯಾವುದೇ ಸಂಗತಿಯ ಅಥವಾ ಕಾನೂನಿನ ತಪ್ಪಿನಿಂದಾಗಿ ಅಥವಾ ಯಾವುದೇ ವಸ್ತು ಸಂಗತಿಯ ಅರಿವಿಲ್ಲದೆಯೇ ಅವರು ಅಥವಾ ಆತ ಹೊರಡಿಸಿದ್ದರೆ, ಆ ಯಾವುದೇ ಆದೇಶವನ್ನು ಪುನರಾವಲೋಕನ ಮಾಡಬಹುದು.

(2) 55ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದಲ್ಲಿರುವ ಹಾಗೂ (2) ಮತ್ತು (3)ನೇ ಉಪಪ್ರಕರಣದಲ್ಲಿರುವ ಉಪಬಂಧಗಳನ್ನು ಆದಷ್ಟು ಮಟ್ಟಿಗೆ, ಆ ಪ್ರಕರಣದ (1)ನೇ ಉಪಪ್ರಕರಣದ ವ್ಯವಹರಣೆಗಳಿಗೆ ಅವು ಅನ್ವಯವಾಗುವಂತೆಯೇ ಈ ಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆಯೂ ಅನ್ವಯಿಸಬಹುದು.

**57. ನಿರ್ದೇಶನಗಳನ್ನು ಕೊಡಲು ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಆದೇಶದ ಮೂಲಕ ಪ್ರಾಧಿಕಾರಕ್ಕೆ ಅಥವಾ ನಿರ್ದೇಶಕನಿಗೆ ಅಥವಾ ರಿಜಿಸ್ಟ್ರಾರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಇತರ ಯಾವೊಬ್ಬ ಅಧಿಕಾರಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಣೆ ಮಾಡಲು ಅಥವಾ ಈ ಅಧಿನಿಯಮದ ಅಡಿಯಲ್ಲಿ ಸೂಕ್ತ ವ್ಯವಹರಣೆಗಳನ್ನು ಕೈಗೊಳ್ಳಲು ನಿರ್ದೇಶಿಸಬಹುದು ಮತ್ತು ನಿರ್ದೇಶಕನು ಅಥವಾ ಸಂದರ್ಭಾನುಸಾರವಾಗಿ ಇತರ ಅಧಿಕಾರಿಯು ತಾನು ಮಾಡಿದ ವಿಚಾರಣೆಯ ಅಥವಾ ಕೈಗೊಂಡ ವ್ಯವಹರಣೆಯ ಫಲಿತಾಂಶವನ್ನು ಯಥಾ ಕ್ರಮದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುದೇ ನಿಯಮಗಳನ್ನು ಅಥವಾ ಆದೇಶಗಳನ್ನು ಅಥವಾ ಅವುಗಳ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವೆಂದು ಅಥವಾ ಯುಕ್ತವೆಂದು ತಾನು ಅಭಿಪ್ರಾಯಪಡುವಂಥ ನಿರ್ದೇಶನಗಳನ್ನು ಯಾವುದೇ ಶಿಕ್ಷಣ ಸಂಸ್ಥೆಗೆ ನೀಡಬಹುದು ಮತ್ತು ಸಂದರ್ಭಾನುಸಾರವಾಗಿ ಅಂಥ ಶಿಕ್ಷಣ ಸಂಸ್ಥೆಯ ಆಡಳಿತ ವರ್ಗವು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ತನ್ನ ನಿಯಂತ್ರಣದಲ್ಲಿರುವ ಅಧಿಕಾರಿಗಳಿಗೆ ಅಥವಾ ಪ್ರಾಧಿಕಾರಿಗಳಿಗೆ ತಾನು ಅವಶ್ಯಕವೆಂದು ಅಥವಾ ಯುಕ್ತವೆಂದು ಅಭಿಪ್ರಾಯಪಡುವಂತಹ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ನಿರ್ದೇಶನಗಳ್ನು ಪಾಲಿಸುವುದು ಅಂಥ ಅಧಿಕಾರಿಗಳ ಅಥವಾ ಪ್ರಾಧಿಕಾರಿಗಳ ಕರ್ತವ್ಯವಾಗಿರತಕ್ಕದ್ದು.

**58. ಪ್ರವೇಶಿಸುವ ಮತ್ತು ಪರಿಶೀಲಿಸುವ ಅಧಿಕಾರ.– (1)** ನಿಯಮಿಸಬಹುದಾದ ಅಂಥ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಪ್ರತಿಯೊಬ್ಬ ಅಧಿಕಾರಿಯೂ, ನಿಯಮಿಸಬಹುದಾದ ಅಂಥ ಷರತ್ತುಗಳಿಗೊಳಪಟ್ಟು, ಶಿಕ್ಷಣ ಸಂಸ್ಥೆಯ ವಾಡಿಕೆಯ ಕೆಲಸದ ವೇಳೆಯ ಅವಧಿಯ ಯಾವುದೇ ಸಮಯದಲ್ಲಿ ತನ್ನ ಅಧಿಕಾರ ವ್ಯಾಪ್ತಿಯೊಳಗಿರುವ ಯಾವುದೇ ಅಂಥ ಸಂಸ್ಥೆಯ ಯಾವುದೇ ಆವರಣಗಳನ್ನು ಪ್ರವೇಶಿಸಲು ಮತ್ತು ಈ ಅಧಿನಿಯಮದ ಅಡಿಯಲ್ಲಿ ತನ್ನ ಅಧಿಕಾರಗಳನ್ನು ಚಲಾಯಿಸುವ ಮತ್ತು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಅಂಥ ಸಂಸ್ಥೆಗೆ ಸಂಬಂಧಿಸಿದ ಯಾವುದೇ ದಾಖಲೆಯನ್ನು,

ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜುಗಳನ್ನು ಅಥವಾ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಪರಿಶೀಲಿಸಲು ಸಕ್ಷಮವಾಗಿರತಕ್ಕದ್ದು.

(2) ಈ ಸಂಬಂಧದಲ್ಲಿ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು, ಅಧಿನಿಯಮದ ಯಾವುವೇ ಉಪಬಂಧಗಳ ಉಲ್ಲಂಘನೆಯಾಗುತ್ತಿದೆ ಎಂದು ಅಥವಾ ಉಲ್ಲಂಘನೆಯಾಗಿದೆ ಎಂದು ಅವನಿಗೆ ನಂಬಲು ಕಾರಣವಿದ್ದರೆ, ಯಾವುದೇ ಶಿಕ್ಷಣ ಸಂಸ್ಥೆಯ ವಾಡಿಕೆ ಕೆಲಸದ ವೇಳೆಯ ಯಾವುದೇ ಸಮಯದಲ್ಲಿ ಅಂಥ ಸಂಸ್ಥೆಗೆ ಅಥವಾ ಆ ಸಂಸ್ಥೆಯ ಆಡಳಿತ ಪರಿಷತ್ತಿಗೆ ಸೇರಿದ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ದಾಖಲೆಗಳು, ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ಇತರ ದಾಖಲೆಗಳನ್ನು ಅಂಥ ಸಂಸ್ಥೆಗೆ ಅಥವಾ ಆಡಳಿತ ಮಂಡಳಿಗೆ ಅವು ಸಂಬಂಧಪಡುವಷ್ಟರ ಮಟ್ಟಿಗೆ ಶೋಧಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಯಾವುದೇ ಅಂಥ ಉಲ್ಲಂಘನೆ ನಡೆಯುತ್ತಿದೆಯೇ ಅಥವಾ ನಡೆದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಅಂಥ ದಾಖಲೆ, ಲೆಕ್ಕಪತ್ರ ಅಥವಾ ಇತರ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು.

(3) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಶಿಕ್ಷಣ ಸಂಸ್ಥೆಯ ಹಣಕಾಸುಗಳನ್ನು ಅಥವಾ ಸಂಪನ್ಮೂಲಗಳನ್ನು ಅಥವಾ ಆಸ್ತಿಗಳನ್ನು ಸೂಕ್ತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಕೆಯಾಗುವಂತೆ ಖಚಿತಪಡಿಸಿಕೊಳ್ಳುವುದಕ್ಕಾಗಿ, ರಾಜ್ಯ ಸರ್ಕಾರವು, (2)ನೇ ಉಪಪ್ರಕರಣದ ಉಪಬಂಧಗಳ ನೆರವು ಪಡೆಯುವುದು ಮತ್ತು ಯಾವುದೇ ಸಂಸ್ಥೆಯ ಹಣಕಾಸುಗಳು, ಸಂಪನ್ಮೂಲಗಳು ಹಾಗೂ ಆಸ್ತಿಗಳು - ಇವುಗಳ ಬಗ್ಗೆ ಖಚಿತವಾಗಿ ತಿಳಿದುಕೊಳ್ಳುವುದು ಮತ್ತು ಹಾಗೆ ಖಚಿತವಾಗಿ ತಿಳಿದುಕೊಂಡ ತರುವಾಯ, ಆಡಳಿತ ಪರಿಷತ್ತಿಗೆ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನ ನೀಡುವುದು ಸಕ್ಷಮವಾಗಿರತಕ್ಕದ್ದು.

(4) ಶೋಧನೆ ಹಾಗೂ ಜಪ್ತಿಗೆ ಸಂಬಂಧಪಡುವ ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರಾಧಿನಿಯಮ 2) ಉಪಬಂಧಗಳು, (2)ನೇ ಉಪಪ್ರಕರಣದ ಅಡಿಯಲ್ಲಿಯ ಶೋಧನೆ ಹಾಗೂ ಜಪ್ತಿಗೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**59. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಅಥವಾ ಪೂರ್ವಭಾವಿ ಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ಹೊರಡಿಸಿದ ಅಥವಾ ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಅದು ಅಧಿವೇಶನದಲ್ಲಿರುವಾಗ ಮತ್ತು ಅದು ಅಧಿವೇಶನದಲ್ಲಿ ಇಲ್ಲದಿರುವಾಗ ಅಧಿವೇಶನದ ತರುವಾಯ ಅದರ ನಿಕಟ ತರುವಾಯ ಬರುವ ಒಂದು ಅಥವಾ ಎರಡು ಅಧಿವೇಶನಗಳಲ್ಲಿ ಅಡಕಗೊಳ್ಳಬಹುದಾದ ಒಟ್ಟು ಹದಿನಾಲ್ಕು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಾಗೆ ಇರಿಸಲಾದ ಅಧವೇಶನದ ಅಥವಾ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಅಥವಾ ಅಧಿಸೂಚನೆ ಅಥವಾ ನಿಯಮದ ರದ್ದಿಯಾತಿಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅನಂತರ ಆ ಅಧಿಸೂಚನೆಯು ಅಥವಾ ನಿಯಮವು, ಆ ಮಾರ್ಪಾಟು ಅಥವಾ ರದ್ದಿಯಾತಿಯ ಅಧಿಸೂಚನೆಯ ದಿನಾಂಕದಿಂದ ಸಂದರ್ಭಾನುಸಾರ ಅಂಥ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ರದ್ದಾಗತಕ್ಕದ್ದು. ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಥವಾ ನಿಯಮದ ಅಡಿಯಲ್ಲಿ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**60. ವಿನಿಯಮಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ.–** ಪ್ರಾಧಿಕಾರವು ಈ ಅಧಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ಮತ್ತು 59ನೇ ಪ್ರಕರಣದ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸಲು ಅಧಿಸೂಚನೆಯ ಮೂಲಕ ವಿನಿಯಮಗಳನ್ನು ರಚಿಸಬಹುದು.

**61. ತಾತ್ಕಾಲಿಕ ಉಪಬಂಧಗಳು.–** ಕರ್ನಾಟಕ ಶುಶ್ರೂಷಕಿಯರು, ದಾದಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) ಅಡಿಯಲ್ಲಿ ರಚಿಸಲಾದ ಅಥವಾ ಹೊರಡಿಸಿದ ಅಥವಾ ಅನ್ಯಥಾ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮತ್ತು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಜಾರಿಯಲ್ಲಿದ್ದ ಅಧಿನಿಯಮವಾದಂಥ ಅಧಿನಿಯಮದ ಅನುಸರಣೆಗೆ ಸಂಬಂಧಿಸಿದ ಯಾವುದೇ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಿದ ಅಥವಾ ಸಂಬಂಧಪಟ್ಟ ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಾತಿಗಳು ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದಡಿಯಲ್ಲಿ ಮಾಡಲಾದ ಅಥವಾ ಕೈಗೊಂಡ ಯಾವುದೇ ಕ್ರಮ ಅಥವಾ

ಯಾವುದೇ ನಿಯಮ, ಅಧಿಸೂಚನೆ, ಆದೇಶ ಅಥವಾ ನೇಮಕಾತಿಗಳ ಮೂಲಕ ರದ್ದುಗೊಳಿಸದ ಹೊರತು ಮತ್ತು ರದ್ದುಗೊಳಿಸುವವರೆಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಅಡಿಯಲ್ಲಿ ರಚಿಸಿದಲ್ಲಿ ಅಥವಾ ಹೊರಡಿಸಿದಲ್ಲಿ ಅಥವಾ ನೇಮಕ ಮಾಡಿದಲ್ಲಿ ಜಾರಿಯಲ್ಲಿರುವಂತೆ ಮತ್ತು ಪರಿಣಾಮಕಾರಿಯಾಗಿರುವಂತೆ ಮುಂದುವರಿಯತಕ್ಕದ್ದು.

**62. 1962ರ ಕರ್ನಾಟಕ ಅಧಿನಿಯಮದ ತಿದ್ದುಪಡಿ.–** ಕರ್ನಾಟಕ ಶುಷ್ರೂಷಕಿಯರು, ದಾದಿಯರು ಮತ್ತು ಆರೋಗ್ಯ ಸಂದರ್ಶಕರ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 4) 23 ಮತ್ತು 24ನೇ ಪ್ರಕರಣಗಳನ್ನು ಬಿಟ್ಟು ಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಜಿ.ಕೆ.ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) (500 ಪ್ರತಿಗಳು)

## GOVERNMENT OF KARNATAKA

No. HFW 217 MMC 2013

Karnataka Government Secretariat,
Vikas soudha,
Bengalore, Dated: 05.08.2013.

## NOTIFICATION

In exercise of the powers conferred by sub-section (2) of section 1 of the Karnataka Nursing and Paramedical Sciences Education (Regulation) Authority Act, 2012 (Karnataka Act 10 of 2013) the Government of karnataka, hereby appoints the 05.08.2013 as the date on which all the provisions the said Act shall come in to force.

By order and in the name of
Governor of Karnataka.

**(MAHABOOBKHAN)**
Under Secretary to Government-2
Health and Family Welfare Department
(Medical Education)